ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 | ಸಂಚಿಕೆ 35 | ಆಗಸ್ಟ್ 28, 1988 | ಬೆಲೆ 1-00 ರೂ.

ಒಳಗಿನ ಪುಟಗಳಲ್ಲಿ

ಹತ್ತಿ ಗಿರಣಿ ಕಾರ್ಮಿಕರ ಸಮಾವೇಶದ ಕರೆ

ಸೆ. 12-17 ಬೇಡಿಕೆ ಸಪ್ತಾಹ, ವಿಧಾನಸೌಧ ಚಲೋ ಯಶಸ್ವಿಗೊಳಿಸಿ

"ಕೇಂದ್ರ ಸರ್ಕಾರದ ನೂತನ ಜವಳಿ ನೀತಿಯು ಗುತ್ತೆದಾರಿ ಬಂಡವಾಳ ಶಾಹಿಗಳಿಗೆ ಮತ್ತು ಕಳ್ಳಸಾಗಾಣೆದಾರರಿಗೆ ಮಾತ್ರ ಅನುಕೂಲವಾಗಿದೆ" ಎಂದು ರಾಜ್ಯದ ಮಾಜೀ ಕಾರ್ಮಿಕ ಸಚಿವರಾದ ಎಸ್.ಕೆ. ಕಾಂತಾ ಹೇಳಿದ್ದಾರೆ. ಅವರು ಆಗಸ್ಟ್ 24ರಂದು ಬೆಂಗಳೂರಿನ ಪುರಭವನದಲ್ಲಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಎಚ್. ಎಂ. ಎಸ್. ಕೇಂದ್ರ ಕಾರ್ಮಿಕ ಸಂಘಗಳ ಜಂಟೀ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಕರ್ನಾಟಕ ರಾಜ್ಯ ಹತ್ತಿ ಗಿರಣಿ ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರೆದು ಮಾತನಾಡಿದ ಅವರು "ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಯಿಂದಾಗಿ ಜವಳಿ ಗಿರಣಿ ಮಾಲೀಕರಿಗೆ ಗಿರಣಿಗಳನ್ನು ಮುಚ್ಚಿ ಬೇರೆ ಉದ್ಯೋಗಗಳಲ್ಲಿ ಬಂಡವಾಳವನ್ನು ವರ್ಗಾಯಿಸಲು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ದೇಶದಲ್ಲಿ 2 ಲಕ್ಷಕ್ಕೂ ಹೆಚ್ಚು ಜವಳಿ ಗಿರಣಿ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ." ಜವಳಿ ಕೈಗಾರಿಕೆಯ ರಕ್ಷಣೆಗಾಗಿ ಸ್ಥಾಪಿಸಲಾದ ಎನ್.ಟಿ.ಸಿ. ಸಹ ಇಂದು ಕಾರ್ಮಿಕರನ್ನು ಕೆಲಸದಿಂದ ಕಡಿಮೆ ಮಾಡುತ್ತಿದೆ ಎಂದು ಆಪಾದಿಸಿದ ಅವರು ಉದ್ಯೋಗವನ್ನು ಉಳಿಸಿಕೊಳ್ಳಲು ದೇಶ ವ್ಯಾಪಿ ಐಕ್ಯ ಹೋರಾಟ ನಡೆಸಬೇಕಾಗಿದೆ ಎಂದು ಹೇಳಿದರು.

ಲೇ ಆಫ್, ರಿಟ್ರೆಂಚ್‌ಮೆಂಟ್ ಇತರ ಉದ್ದಿಮೆಗಳಲ್ಲಿಯೂ ಹರಡಿರುವುದರಿಂದ ಈ ಪ್ರಶ್ನೆಯನ್ನು ದೇಶದ ಇಡೀ ಕಾರ್ಮಿಕ ವರ್ಗ ಒಂದಾಗಿ ಎದುರಿಸಬೇಕು ಎಂದು ಹೇಳಿದ ಶ್ರೀಕಾಂತಾ ಅವರು ಕಾರ್ಮಿಕ ಸಂಘಗಳು ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವ ದಿಕ್ಕಿನಲ್ಲಿ ಗಮನ ಕೊಡಬೇಕು ಎಂದು ಸೂಚಿಸಿದರು.

ಕೇಂದ್ರ ಸರ್ಕಾರವು ಜಾರಿಗೆ ತರಲು ಹೊರಟಿರುವ ಕೈಗಾರಿಕಾ ಬಾಂಧವ್ಯಗಳ ಮಸೂದೆಯೂ ಕಾರ್ಮಿಕ ವಿರೋಧಿ ಅಂಶಗಳನ್ನು ಹೊಂದಿರುವುದರಿಂದ ಇದರ ವಿರುದ್ಧವು ಕಾರ್ಮಿಕರು ಹೋರಾಡಬೇಕು ಎಂದು ಅಭಿಪ್ರಾಯ ಪಟ್ಟರು.

ಆರಂಭದಲ್ಲಿ ಎಂ.ಸಿ. ವೆಂಕಟರಾಮು ಸ್ವಾಗತಿಸಿದರು. ಸ್ವಾಗತ ಸಮಿತಿಯ ಪತಿಯಿಂದ ಸಿದ್ಧಪಡಿಸಲಾಗಿದ್ದ ಹೇಳಿಕೆಯನ್ನು ವಿ.ಜೆ.ಕೆ. ನಾಯರ್ ಮಂಡಿಸಿದರು. ಸಿ.ಐ.ಟಿ.ಯು. ಪರವಾಗಿ ಮಾತನಾಡಿದ ಎಸ್. ಸೂರ್ಯನಾರಾಯಣ ರಾವ್, ಎ.ಐ.ಟಿ.ಯು.ಸಿ. ಪರವಾಗಿ ಮಾತನಾಡಿದ ಎಂ.ಸಿ. ನರಸಿಂಹನ್ ಮತ್ತು ಎಚ್.ಎಂ.ಎಸ್. ಪರವಾಗಿ ಮಾತನಾಡಿದ ಶ್ರೀಧರ್ ಕುಲಕರ್ಣಿ ಅವರು ಮಾತನಾಡಿ ಸಮಾವೇಶವು ತೀರ್ಮಾನಿಸುವ ಹೋರಾಟಕ್ಕೆ ತಮ್ಮ ಸಂಘಟನೆಗಳ ಬೆಂಬಲ ನೀಡುವುದಾಗಿ ಹೇಳಿದರು.

ಸಮಾವೇಶದಲ್ಲಿ ಮಂಡಿಸಲಾದ ಹೇಳಿಕೆಯ ಮೇಲೆ ಪ್ರತಿನಿಧಿಗಳು ಚರ್ಚೆ ಮಾಡಿದ ನಂತರ ಈ ಕೆಳಗಿನ ತೀರ್ಮಾನಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1. ಸೆಪ್ಟಂಬರ್ 12 ರಿಂದ 17ರ ವರೆಗೆ ಜವಳಿ ಕಾರ್ಮಿಕರ "ಬೇಡಿಕೆ ಸಪ್ತಾಹ" ಆಚರಿಸಿ ರಾಜ್ಯಾದ್ಯಂತ ಸಭೆ, ಮೆರವಣಿಗೆ, ಧರಣಿ ಸತ್ಯಾಗ್ರಹ ಮೊದಲಾದವುಗಳನ್ನು ನಡೆಸುವುದು.

2. ಮುಚ್ಚಿರುವ ಹತ್ತಿ ಗಿರಣಿಗಳನ್ನು ತೆರೆಯಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಾಯ ತರಲು ಮುಂದಿನ ವಿಧಾನಸಭಾಧಿವೇಶನದ ಸಮಯದಲ್ಲಿ ರಾಜ್ಯದ ಜವಳಿ ಕಾರ್ಮಿಕರ "ವಿಧಾನಸೌಧ ಚಲೋ" ಚಳುವಳಿ ನಡೆಸುವುದು.

3. ರಾಜ್ಯದಲ್ಲಿ ಮುಚ್ಚಿರುವ ಗಿರಣಿಗಳನ್ನು ತೆರೆಯುವಂತೆ ಒತ್ತಾಯಿಸಿ ಮತ್ತು ಆಧುನೀಕರಣದ ಸಂದರ್ಭದಲ್ಲೂ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಬಾರದು ಎಂದು ಒತ್ತಾಯಿಸಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳ ಬೆಂಬಲದೊಂದಿಗೆ "ಕರ್ನಾಟಕ ಬಂದ್" ನಡೆಸಲು ಏರ್ಪಾಡು ಮಾಡುವುದು.

ಸಮಾವೇಶದ ಅಧ್ಯಕ್ಷೀಯ ಮಂಡಳಿಯ ಪರವಾಗಿ ಮಾತನಾಡಿದ ಶಾಸಕ ಪಂಪಾಪತಿಯವರು ಸಮಾವೇಶದ ತೀರ್ಮಾನವನ್ನು ಯಶಸ್ವಿಗೊಳಿಸುವಂತೆ ರಾಜ್ಯದ ಕಾರ್ಮಿಕ ವರ್ಗವನ್ನು ವಿನಂತಿಸಿಕೊಂಡರು. ಸಮಾವೇಶದ ತೀರ್ಮಾನಗಳನ್ನು ಕೆ. ಎಸ್. ಸುಬ್ರಮಣ್ಯಂರವರು ಮಂಡಿಸಿದರು.

ಸಮಾವೇಶದ ಅಂಗವಾಗಿ "ರಾಜಭವನ ಚಲೋ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನೂರಾರು ಮಹಿಳಾ ಕಾರ್ಮಿಕರನ್ನು ಒಳಗೊಂಡು ಸಹಸ್ರಾರು ಮಂದಿ ಮೆರವಣಿಗೆಯಲ್ಲಿ ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ಮನವಿಯನ್ನು ಅರ್ಪಿಸಲಾಯಿತು.

ರಾಜ್ಯದಲ್ಲಿ ಮುಚ್ಚಲಾದ ಗಿರಣಿಗಳನ್ನು ತೆರೆಯಲು ಹಾಗೂ ಕಾರ್ಮಿಕರಿಗೆ ಉದ್ಯೋಗದ ಭದ್ರತೆಯನ್ನು ಒದಗಿಸಲು ರಾಜ್ಯಪಾಲರು ಮಧ್ಯಪ್ರವೇಶಿಸಬೇಕೆಂದೂ ಮತ್ತು ಕೇಂದ್ರ ಸರ್ಕಾರವು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ತನ್ನ ಹೊಸ ಜವಳಿ ನೀತಿಯನ್ನು ಪರಿಷ್ಕರಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ರಾಜ್ಯಪಾಲರಿಗೆ ಸಲ್ಲಿಸಲಾದ ಮನವಿಯಲ್ಲಿ ಒತ್ತಾಯಿಸಲಾಗಿದೆ.

(ಸಮಾವೇಶದಲ್ಲಿ ಕಾ|| ವಿ.ಜೆ.ಕೆ. ನಾಯರ್ ಮಂಡಿಸಿದ ವರದಿಗೆ ಪುಟ 4-5 ನೋಡಿ)

ಹೊಸ ಜನತಾ ಸರ್ಕಾರದ ನೀತಿಯಲ್ಲಿ ಬದಲಾವಣೆ ಬರಲಿ

—ಎನ್. ಕೆ. ಉಪಾಧ್ಯಾಯ

ಇತ್ತೀಚಿನ ತಿಂಗಳುಗಳಲ್ಲಿ ಬಹಳ ನೆನೆಗುದಿಗೆ ಬಿದ್ದು, ರಾಜ್ಯದಲ್ಲಿ ಜನತಾ ಪಕ್ಷವೇ ಇಬ್ಭಾಗವಾಗುವಂಥ ಗಡಿ ತಲ್ಪಿದಾಗ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು, ಯಾವುದೇ ಕಾರಣದಿಂದಿರಲಿ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ರಾಜ್ಯದಲ್ಲಿ ಹೊಸ ಪರಿಸ್ಥಿತಿ ಉಂಟುಮಾಡಿದಂತಾಗಿದೆ. ಜನತಾ ಪಕ್ಷದೊಳಗಿನ ಜಗಳ ಸದ್ಯಕ್ಕಂತೂ ಮರೆಯಾದಂತಾಗಿದೆ. ಕಳೆದ ಕೆಲವು ತಿಂಗಳಿಂದ ರಾಮಕೃಷ್ಣ ಹೆಗಡೆಯವರ ಆಡಳಿತೆಯ ವೈಖರಿ ಹಾಗೆಯೇ ಜನತಾ ಪಕ್ಷದೊಳಗಿನ ಜಗಳ, ರಾಮಕೃಷ್ಣ ಹೆಗಡೆ–ದೇವೇಗೌಡರ ಬಹಿರಂಗ ಭಾಷಣಗಳು, ಹೇಳಿಕೆಗಳು ಸಾರ್ವಜನಿಕರಲ್ಲಿ ಜುಗುಪ್ಸೆ ಉಂಟುಮಾಡಿದ್ದವು. ಆಡಳಿತೆ ಸಂಪೂರ್ಣ ಕುಸಿದಿತ್ತು, ಭ್ರಷ್ಟಾಚಾರ ಮಿತಿಮೀರಿತ್ತು. ಅಧಿಕಾರಿಗಳ, ನೌಕರರ ಬದ್ಲಿಯಿಂದ ಹಿಡಿದು ಸರಕಾರಿ ಕೆಲಸದ ಪ್ರತಿಯೊಂದು ರಂಗದಲ್ಲಿ, ಕ್ಷೇತ್ರದಲ್ಲಿ ಹೆಜ್ಜೆಯಲ್ಲಿ ಮಂತ್ರಿಗಳ, ಜನತಾ ಪಕ್ಷದ ಮುಖಂಡರ ರಾಜಕೀಯ ಕೈವಾಡ ಹದ್ದು ಮೀರಿ ಅಧಿಕಾರಿಗಳೂ ನೌಕರರೂ ಕಂಗಾಲಾಗಿದ್ದರು. ಅದರ ಜೊತೆಯಲ್ಲಿಯೇ ಬಹಿರಂಗ ಆಪಾದನೆಗಳು ಜನರ ಮನಸ್ಸಿನಲ್ಲಿ ಬೇಸರ ಉಂಟುಮಾಡಿತ್ತು. ಸರಕಾರಿ ನೌಕರರ, ಶಿಕ್ಷಕರ, ಇತರ ಸೇವಾ ವೃತ್ತಿಗಳ ಕೆಲಸಗಾರರ ಸಮಸ್ಯೆಗಳನ್ನು, ಸಹಕಾರಿ ನೂಲಿನ ಗಿರಣಿ ಮುಚ್ಚುವಿಕೆಯ ಕುರಿತು, ನೀರಾವರಿ ಯೋಜನೆಗಳು, ಮಧ್ಯಮ–ಸಣ್ಣ ಕೈಗಾರಿಕೆಗಳ ಕುರಿತು ಸರಕಾರದ ನಿಲುವು ಸಮರ್ಪಕವಾಗಿರಲಿಲ್ಲ. ರೈತರಿಗೆ ಪಟ್ಟಾ ನೀಡುವಿಕೆ, ಸರಕಾರಿ ಭೂಮಿಯ ಹಂಚುವಿಕೆ, ಹಾಗೆಯೇ ರೈತರ ಇತರ ಸಮಸ್ಯೆಗಳೂ ಬಗೆಹರಿಯದೆ ರೈತ ಸಮೂಹದಲ್ಲಿಯೂ ಅಸಮಾಧಾನದ ಹೊಗೆಯಾಡುತ್ತಿತ್ತು.

ಆಗಸ್ಟ್ 16 ರ ಕರ್ನಾಟಕ ರಾಜ್ಯ ಸಮಿತಿ ತನ್ನ ನಿರ್ಣಯದಲ್ಲಿ ಅಭಿಪ್ರಾಯಪಟ್ಟಂತೆ "ಬೆಂಗಳೂರು ಮತ್ತು ಇತರ ಪ್ರದೇಶಗಳ ಕಾರ್ಮಿಕ ವರ್ಗ ಕೇಂದ್ರ ಸರಕಾರದ ನೀತಿಗಳ ವಿರುದ್ಧ ಸಾರ್ವಜನಿಕ ವಲಯದಲ್ಲಿ ನಡೆಸಿದ ಹೋರಾಟ ಗುಂಡೂರಾವ ಸರಕಾರ ಹರಿಯಬಿಟ್ಟ ದಾಳಿಯ ವಿರುದ್ಧ ರೈತ ಸಮೂಹ ನಡೆಸಿದ ಹೋರಾಟ–ಇವುಗಳು 1983 ರಲ್ಲಿ ಜನತಾ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದೀತೇ ವಿನಹ ಆಕರ್ಷಣೆ ಇಲ್ಲವೇ ಇತರೇ ಅಸ್ತಿತ್ವದಲ್ಲಿ ಇರದ ವಿಚಾರಗಳು ಅವರನ್ನು ಅಧಿಕಾರಕ್ಕೆ ಏರಿಸಲಿಲ್ಲ ಎಂಬುದನ್ನು ಅವರು ನೆನಪಿಸಿಕೊಂಡರೆ ಉತ್ತಮ ಎಂದು ಜನತಾ ಪಕ್ಷದ ಮುಖಂಡರನ್ನು ಎಚ್ಚರಿಸಿದೆ. ಹಾಗೆಯೇ ಸಾಮಾನ್ಯ ಸಾರ್ವತ್ರಿಕ ಚುನಾವಣೆ ಬದಲು ಕೇವಲ ಇನ್ನು 17 ತಿಂಗಳುಮಾತ್ರ ಇದ್ದು ಈ ಸರ್ಕಾರದ ಸಾಧನೆ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಅತ್ಯಂತ ಪ್ರಮುಖವಾಗಲಿದೆ' ಎಂದು ಹೇಳಿ, 'ಬಡ ಮತ್ತು ಮಧ್ಯಮ ವರ್ಗದ ಪಾರು ಭೂಮಿ ಉಳುಮೆದಾರರಿಗೆ ಹಕ್ಕುಪತ್ರ ನೀಡುವುದು, ಕಾರ್ಮಿಕ ವರ್ಗದವರ ನೀತಿಯನ್ನನುಸರಿಸುವುದು, ಕ್ಯಾಪಿಟೇಶನ

(8ನೇ ಪುಟ ನೋಡಿ)

ಸ್ವಾತಂತ್ರ್ಯ ದಿನ: ಎರಡು ಸಂದೇಶಗಳು

ಎಂದಿನಂತೆ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ದೇಶದ ಜನತೆಗೆ ಎರಡು ಸಂದೇಶಗಳು ಕೊಡಲ್ಪಟ್ಟವು. ಒಂದು ಆಗಸ್ಟ್ 14 ಅಂದರೆ ಸ್ವಾತಂತ್ರ್ಯ ಮುನ್ನಾ ದಿನ ರಾಷ್ಟ್ರಪತಿಗಳು ಕೊಟ್ಟ ಸಂದೇಶ, ಎರಡನೆಯದು ಪ್ರಧಾನ ಮಂತ್ರಿ ಕೆಂಪು ಕೋಟೆಯಲ್ಲಿ ನೀಡಿದ ಸಂದೇಶ. ಈ ಎರಡು ಸಂದೇಶಗಳು ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿಗಳು ಜನತೆಯ ಜತೆ ತಮ್ಮ ಅನ್ನಿಸಿಕೆಗಳನ್ನು ಹಂಚಿಕೊಳ್ಳುವ ಸಂದರ್ಭ.

ರಾಷ್ಟ್ರಪತಿ ವೆಂಕಟರಾಮನ್ ತಮ್ಮ ಎದೆಯೊಳಗಿನ ಆತಂಕವನ್ನು ಸಂದೇಶದಲ್ಲಿ ತೋಡಿಕೊಂಡರು. "ನಮ್ಮ ಸಮಾಜದ ಕೆಲವು' ಶಕ್ತಿಗಳು ತಮ್ಮ ಸ್ವಾರ್ಥಪರ ಸಂಕುಚಿತ ಉದ್ದೇಶಗಳಿಗೆ ಚುನಾವಣೆಯ ಪ್ರಕ್ರಿಯೆಯನ್ನೇ ಬುಡಮೇಲು ಮಾಡಲು ಮೂಲೆ ಗುಂಪು ಮಾಡಲು ಹೇಸುತ್ತಿಲ್ಲ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಬುಡ ಮೇಲು ಮಾಡುವವರನ್ನು ಖಂಡಿಸಲು ಎಷ್ಟು ಕಠಿಣ ಶಬ್ದಗಳನ್ನು ಉಪಯೋಗಿಸಿದರೂ ಸಾಲದು ಮತದಾನದ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸಿ ಅದನ್ನು ಹಿಸುಕಿ ಹಾಕಲು ಪ್ರಯತ್ನಗಳನ್ನು ಮಾಡುವವರು ನಮ್ಮ ರಾಜಕೀಯ ಪದ್ಧತಿಯ ಬುಡಕ್ಕೆ ಕೊಡಲಿಯೇಟು ಹಾಕುತ್ತಿದ್ದಾರೆ. ಮುಕ್ತ ಮತ್ತು ನ್ಯಾಯಬದ್ಧ ಚುನಾವಣೆಗಳು ನಡೆಯುವಂತೆ ಕಾಳಜಿ ವಹಿಸುವ ಗುರುತರ ಜವಾಬ್ದಾರಿ ಆಳುವ ಮತ್ತು ವಿರೋಧ ಪಕ್ಷಗಳೆರಡಕ್ಕೂ ಇದೆ. ಇದು ರಾಷ್ಟ್ರಪತಿಗಳು ತಮ್ಮ ಆತಂಕ ತೋರಿದ ಬಗೆ.

ರಾಷ್ಟ್ರಪತಿಗಳ ಸಂದೇಶ "ಚುನಾವಣಾ ರೀತಿ ರಿವಾಜುಗಳನ್ನು ಮುರಿಯುವುದರ ವಿರುದ್ಧ ಎಲ್ಲಾ ರಾಜಕೀಯ ಪಕ್ಷಗಳಿಗಿರಬೇಕಾದ ಕಾಳಜಿ ಬಗ್ಗೆ ಒತ್ತು ಕೊಟ್ಟಿದ್ದು ಹಲವರ ಗಮನ ಸೆಳೆದಿದೆ.' ಎಂದು ಆಗಸ್ಟ್ 16 ರ ಹಿಂದೂ ಪತ್ರಿಕೆ ಸಂಪಾದಕೀಯ ಬರೆದಿದೆ. ಆ ಪತ್ರಿಕೆಯ ಪ್ರಕಾರ ಕಾಂಗ್ರೆಸ್(ಐ) ಮತ್ತು ವಿರೋಧ ಪಕ್ಷಗಳ ರಾಜ್ಯ ಸರ್ಕಾರಗಳು ತಮ್ಮ ಪರವಾದ ತೀರ್ಪು ಪಡೆಯಲು ಚುನಾವಣಾ ಸಮಯದಲ್ಲಿ ನಿಯಮಗಳನ್ನು ಮುರಿಯುತ್ತಿವೆ ಎಂಬ ಆಪಾದನೆಗಳನ್ನು ಪರಸ್ಪರ ಹಾಕುತ್ತಿರುವುದಕ್ಕೆ ಹೋಲಿಸಿದರೆ ರಾಷ್ಟ್ರಪತಿಗಳ ಆತಂಕ ತುಂಬಾ ಭಿನ್ನವಾಗಿದೆ.'

ಆಳುವ ಮತ್ತು ವಿರೋಧ ಪಕ್ಷಗಳ ಮೇಲೆ ಸಮಾನವಾಗಿ ಆಪಾದನೆ ಹಾಕುತ್ತಿರುವ ರಾಷ್ಟ್ರಪತಿಗಳು ಪೂರ್ಣ ಸತ್ಯವನ್ನು ಹೇಳುತ್ತಿಲ್ಲ. ಕೆಲವು ವಿರೋಧ ಪಕ್ಷಗಳು ಚುನಾವಣೆ ಗೆಲ್ಲಲು ಅನ್ಯಾಯದ ಮಾರ್ಗ

(8ನೇ ಪುಟ ನೋಡಿ)

ವಿವಾದದ ಸುಳಿಯಲ್ಲಿ ರ್ಯಾಂಬೋ

ಇದೇ ಜೂನ್‌ನಲ್ಲಿ ರ್ಯಾಂಬೋ–3 ಬಿಡುಗಡೆಯಾದಾಗ ರ್ಯಾಂಬೋ ಚಿತ್ರ ನಡೆಯುತ್ತಿದ್ದ ಎಲ್ಲಾ ಚಿತ್ರಮಂದಿರಗಳ ಮುಂದೆ ಅಮೇರಿಕನ್ನರು ರ್ಯಾಂಬೋ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಚಿತ್ರವನ್ನು ಬಹಿಷ್ಕರಿಸುವಂತೆ ಪ್ರದರ್ಶನ ನಡೆಸಿದರು. ಅಮೇರಿಕಾ ಮಾತ್ರವಲ್ಲದೆ ವಿಶ್ವದ 23 ರಾಷ್ಟ್ರಗಳು ಸೇರಿ ರ್ಯಾಂಬೋ ಚಿತ್ರಗಳನ್ನು ಬಹಿಷ್ಕರಿಸುವಂತೆ ಒತ್ತಾಯ ಹೇರುತ್ತಿವೆ.

ಪ್ರಪ್ರಥಮ ಬಾರಿಗೆ ಸೋವಿಯತ್ ಯೂನಿಯನ್–ಅಮೇರಿಕಾ ಕೈ ಕುಲುಕಿ ಯುದ್ಧಗಳಿಗೆ ವಿದಾಯ ಹೇಳಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕುತ್ತಿರುವ ಸಮಯದಲ್ಲಿ ರ್ಯಾಂಬೋ ಚಿತ್ರ ಯುದ್ಧ ಮಾಡಲು ಪ್ರಚೋದಿಸುತ್ತದೆ ಎಂದು ಆರೋಪಿಸಲಾಗಿದೆ. 63 ಮಿಲಿಯ ಡಾಲರ್ ಹಣವನ್ನು ವೆಚ್ಚ ಮಾಡಿ ನಿರ್ಮಿಸಿದ ರ್ಯಾಂಬೋ ಚಿತ್ರ ಹಿಂದಿನ ಚಿತ್ರಗಳಿಗಿಂತ ದುಪ್ಪಟ್ಟು ಹಿಂಸೆಯನ್ನು ತೋರಿಸುತ್ತದೆ ಎಂದು ಆಪಾದಿಸಲಾಗಿದೆ.

ಸಮೂಹ ಮಾಧ್ಯಮಗಳಲ್ಲಿ ಕ್ರೌರ್ಯದ ಮೂಲಕ ಮನರಂಜನೆ ನೀಡಬಯಸುವುದರ ವಿರುದ್ಧ ಇರುವ 'ಐಕೇವ್' ಸಂಸ್ಥೆ 23 ರಾಷ್ಟ್ರಗಳನ್ನು ರ್ಯಾಂಬೋ ವಿರುದ್ಧ ಸಂಘಟಿಸಿದೆ. 'ಐಕೇವ್' ವರದಿಗಳ ಪ್ರಕಾರ 109 ನಿಮಿಷಗಳ ಈ ಚಿತ್ರದಲ್ಲಿ 245 ಬಾರಿ ಹಿಂಸೆಯನ್ನೇ ತೋರಿಸಲಾಗಿದೆ.

ಇದಲ್ಲದೆ ಸೋವಿಯೆತ್ ಯೂನಿಯನ್ ವಿರುದ್ಧ ಪದೇ ಪದೇ ದೋಷಾರೋಪ ಮಾಡುತ್ತಾ ರಷ್ಯನ್ನರನ್ನು ಅತ್ಯಾಚಾರಗಳು, ಹಿಂಸಾರತಿಪ್ರಿಯರು ಎಂಬಂತೆ ವರ್ಣಿಸಲಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ರ್ಯಾಂಬೋ ಅಫಘಾನಿಸ್ತಾನದಲ್ಲಿರುವ ತನ್ನ ಅಮೇರಿಕಾದ ಮಿತ್ರರನ್ನು ಬಚಾವು ಮಾಡುವುದಕ್ಕಾಗಿ ಇಡೀ ಸೋವಿಯೆತ್ ಯೂನಿಯನ್‌ನ ಸೇನೆಯನ್ನು ಒಬ್ಬನೇ ಹೊಸಕಿ ಹಾಕುತ್ತಾನೆ. ಅಮೇರಿಕಾ ಮತ್ತು ಸೋವಿಯೆತ್ ಯೂನಿಯನ್‌ನ ನಡುವೆ ಸೌಹಾರ್ದ ಒಪ್ಪಂದವಾಗಿ ಸೋವಿಯೆತ್ ಯೂನಿಯನ್‌ನ ಸೇನೆಗಳು ಅಫಘಾನಿಸ್ತಾನದಿಂದ ಕಾಲ್ತೆಗೆಯುವ ಸಮಯದಲ್ಲಿ ಈ ಚಿತ್ರ ಶಾಂತಿ ಒಪ್ಪಂದಗಳನ್ನು ಮುರಿಯಲು ಸಜ್ಜಾಗಿದೆ ಎಂದು ಆರೋಪಿಸಲಾಗಿದೆ.

ರ್ಯಾಂಬೋ–3 ಚಿತ್ರಕ್ಕೆ ಅಮೇರಿಕಾ ಸಹ ಇನ್ನಿಲ್ಲದ ಪ್ರಚಾರ ನೀಡಿದೆ. ಅಮೇರಿಕಾದ ಅಧ್ಯಕ್ಷ ರೋನಾಲ್ಡ್ ರೇಗನ್‌ರೂ ಸಹ ರ್ಯಾಂಬೊಗೆ ಹೆಚ್ಚಿನ ಪ್ರಚಾರ ನೀಡಲು ಶ್ರಮಿಸಿದರು. ರೇಗನ್‌ರವರ ರಾಜಕೀಯ ಸೂತ್ರಗಳ ಮೂಗಿನ ನೇರಕ್ಕೆ ರ್ಯಾಂಬೊನ ಸಾಹಸಗಳೂ ಇರುತ್ತಿದ್ದವು. ರೇಗನ್‌ರ ಗುರಿಯಾದ ವಿಯೆಟ್ನಾಂ, ಅಫಘಾನಿಸ್ತಾನಗಳಲ್ಲಿಯೇ ರ್ಯಾಂಬೋ ರಷ್ಯನ್ನರನ್ನು ಅಥವಾ ಅಮೇರಿಕಾದ ಶತ್ರುಗಳನ್ನು ಸದೆಬಡಿಯುತ್ತಿದ ಎಂದು 'ಡೆಕ್ಕನ್ ಹೆರಾಲ್ಡ್' ತನ್ನ ಸಂಪಾದಕೀಯದಲ್ಲಿ ವರ್ಣಿಸಿದೆ. ಇದಲ್ಲದೆ ಇತ್ತೀಚೆಗೆ ರೇಗನ್‌ರವರ ಕಣ್ಣು ಕುಕ್ಕುತ್ತಿರುವ ನಿಕರಾಗುವಾದ ವಿರುದ್ಧವೂ ಚಿತ್ರ ತಯಾರಿಸುವಂತೆ ರ್ಯಾಂಬೋ ಜೊತೆ ಮಾತುಕತೆ ನಡೆಸಿದ್ದರು ಎನ್ನಲಾಗಿದೆ.

ದೂರದರ್ಶನ, ದಿನಪತ್ರಿಕೆಗಳು ರ್ಯಾಂಬೋ ಚಿತ್ರವನ್ನು ಇನ್ನಿಲ್ಲದಂತೆ ವರ್ಣಿಸಿದೆ. ರ್ಯಾಂಬೋ ತರಹದ್ದೇ ಚಿತ್ರಗಳಾದ 13ನೇ ಶುಕ್ರವಾರ, ಮಿಸ್ಸಿಂಗ್ ಇನ್ ಆಕ್ಷನ್, ಬ್ಯಾಡ್ ಡ್ರೀಮ್ಸ್ ಚಿತ್ರಗಳನ್ನು ನೋಡಿದ ಯುವಜನಾಂಗ ನಂತರ ಕೊಲೆ, ಸುಲಿಗೆ, ಅತ್ಯಾಚಾರದಲ್ಲಿ ಸಿಲುಕಿರುವುದು ಸಮೀಕ್ಷೆಯಿಂದ ಹೊರಬಿದ್ದಿದೆ. ರ್ಯಾಂಬೋ ಇದೇ ತರಹದ ಭಯೋತ್ಪಾದನೆಯನ್ನು ಹುಟ್ಟಿ ಹಾಕುವ ಎಲ್ಲಾ ಸಾಧ್ಯತೆಯಿದೆ.

ರ್ಯಾಂಬೋ ವಿರುದ್ಧ ಜನಾಭಿಪ್ರಾಯ ಸಂಗ್ರಹಿಸುತ್ತಿರುವ ಐಕೇವ್‌ನ ಥಾಮಸ್ ರಾಡೆಕಿ ರೂಬಿನ್‌ರವರ ಪ್ರಕಾರ ಇದೊಂದು ಅತ್ಯಂತ ಕೆಳದರ್ಜೆಯ ಸಿನಿಮಾ. ವಿಶ್ವಶಾಂತಿಗೆ ಭಂಗ ತರಲು ರ್ಯಾಂಬೋ ಸರ್ವರೀತಿಯಲ್ಲಿ ಸಜ್ಜಾಗಿದ್ದಾನೆ ಎನ್ನುತ್ತಾರೆ.

ಇತ್ತೀಚೆಗೆ ಲಾಸ್‌ಎಂಜಲೀಸ್‌ನ ಬುದ್ದಿಸ್ಟ್ ಪೀಸ್ ಫೆಲೋಶಿಪ್ ರ್ಯಾಂಬೋನನ್ನು ಬುದ್ಧನೊಡನೆ ತಳುಕು ಹಾಕಿದ್ದಾರೆ. ರ್ಯಾಂಬೊ–ಬುದ್ಧ ಎನ್ನುವ ವಿಗ್ರಹಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಿದ್ದಾರೆ. ಅಹಿಂಸೆ ಭೋದಿಸುವ ಬುದ್ಧನೆಲ್ಲಿ, ಹಿಂಸೆಯ ಸಾಕಾರವಾದ ರ್ಯಾಂಬೋ ಎಲ್ಲಿ' ಎನ್ನಿಸುತ್ತದೆ ಐಕೇವ್. ಇದೀಗ ರ್ಯಾಂಬೋ ಬಳಸುವ ಚೂರಿಯ ಪ್ರತಿಕೃತಿಗಳೂ ಮಾರಾಟಕ್ಕೆ ಬಂದು ಭರ್ಜರಿಯಾಗಿ ಖರ್ಚಾಗುತ್ತವೆ.

ಭಾರತದಲ್ಲೂ ರ್ಯಾಂಬೋ ಪ್ರಚಾರ ಹಿಂದೆ ಬಿದ್ದಿಲ್ಲ. ರ್ಯಾಂಬೋನನ್ನು ಎಲ್ಲೆಡೆಯೂ ಬಳಸಲಾಗುತ್ತಿದೆ. ಇತ್ತೀಚೆಗೆ ತಾನೆ ರ್ಯಾಂಬೋನ ಪ್ರತಿಕೃತಿ ಹೊತ್ತ ಇಸ್ಪೀಟ್ ಎಲೆಗಳು, ಕರೆಕೊಡುವುದು ಹೇಗೆ ಗೊತ್ತೇ? 'ನೀನು ಇದನ್ನು ಬಳಸು ಎಷ್ಟು ತಾಖತ್ತಿರುವ ಗಂಡಸೇ?' ರ್ಯಾಂಬೋ ವಿರುದ್ಧದ ಹೋರಾಟ ಇಲ್ಲಿಯೂ ಅಷ್ಟೇ ಅತ್ಯಗತ್ಯ.

(ಕೃಪೆ : ರೂಪತಾರ)

—ಜಿ. ಎನ್. ಮೋಹನ್

ಯುದ್ಧ ಮತ್ತು ಶಾಂತಿ

ಯುದ್ಧ
ಮಹತ್ವಾಕಾಂಕ್ಷಿಗಳ ತೆವಲು
ಅಧಿಕಾರ ಮತ್ಸರ ಅಮಲು
ನಮಗೆ—
ಯುದ್ಧವೆಂದರೆ ಸಾವು
ನಗೆಯನಳಿಸುವ
ಬದುಕ ಹೊಸಕುವ
ಮನವ ಕಲಕುವ
ಪರಿ ಪರಿಯ ನೋವು
ಹೆಣ್ಣ ಕುಡಿ ನೋಟವೂ ತಾಗದ
ಎಳೆಯ ಎದೆಗಳ ಗುಂಡುಗಳು ತೂರುವ
ಒಲವಿನಪ್ಪುಗೆಯಿಂದ ಹಿಡಿದೆಳೆದು
ಬಂದೂಕಿನ ಬಾಯಿಗಿಡುವ
ಮನೆ ಮನೆಯ ಬೆಳಕುಗಳ
ನುಂಗಿ ನೊಣೆವ ಕತ್ತಲೆಯ ಹಾವು
ಜಾತಿ ಮತ ಧರ್ಮ
ಹೆಣ್ಣು ಹೊನ್ನು ಮಣ್ಣು
ನೆಪ ಯಾವುದಾದರೇನು
ಸ್ವಾರ್ಥಪರ ಕಿಚ್ಚಲ್ಲಿ
ಹಸಿರೆಲೆಯ ಕುಡಿಗಳು
ಹೂ ಮೊಗ್ಗು ಹೀಚುಗಳು
ಹಸಿ ಹಸಿಯೆ ಸುಟ್ಟು ಕರಕಲು
ನಮ್ಮ ಮಗುವಿನ ಕೆನ್ನೆಗೂ ಮಿದುವಾದ
ಹಾಸುಗಂಬಳಿ ಮೇಲೆ ನಡೆದಾಡುತ್ತ
ಗುಂಡು ತೂರದ ಕಾರುಗಳಲಿ ವಿಹರಿಸುತ್ತ
ತಮ್ಮ ಮೂಗಿನ ನೇರಕ್ಕೆ ಈ ಜಗವನಳೆಯುತ್ತ
ಕದನದಾಟವ ಯೋಜಿಸಿದ ಪ್ರಭುಗಳಿಗೆ
ತಿಳಿಯುವುದೆ ಹೆತ್ತ ಕರುಳಿನ ನೋವು
ಬೆಂದ ಮನಗಳ ಕಾವು
ಒಲಿದ ಹೃದಯಗಳ ಸಾವು
ಆಗಸದ ತುಂಬೆಲ್ಲ ಬಾಂಬರುಗಳಾರ್ಭಟಿಸಿ
ಶಾಂತ ಸಾಗರವೀಗ ಮದ್ದು ಗುಂಡಿನ ಮಡಿಲು
ಬನ್ನಿ ಗೆಳೆಯರೆ ಬನ್ನಿ
ನಾವೆ ತೂರಿಬಿಟ್ಟ ಬಿಳಿಯ ಪಾರಿವಾಳದ
ಆ ಮುಗ್ಧ ಕಣ್ಣಲ್ಲಿ
ಶಾಂತಿ ಸ್ನೇಹದ ಬೆಳಕಿನ್ನೂ ಮಿನುಗುತ್ತಿದೆ
ಬನ್ನಿ ಗೆಳೆಯರೆ ಬನ್ನಿ
ಈ ಬೆಳಕ ಉಳಿಸುವ ಛಲಕ್ಕೆ
ಪಣ ತೊಡುವ ಬನ್ನಿ.

—ಡಾ॥ ಕೆ. ಆರ್. ಸಂಧ್ಯಾರೆಡ್ಡಿ

ಪ್ರೌಢಶಾಲಾ ಶಿಕ್ಷಣದ ಆಮೂಲಾಗ್ರ ಬದಲಾವಣೆಗೆ ಒತ್ತಾಯ

ಎಸ್.ಎಫ್.ಐ. ಬೆಂಗಳೂರು ನಗರ ಸಮಿತಿ ಆಶ್ರಯದಲ್ಲಿ ಪ್ರೌಢಶಾಲಾ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಸಮಾವೇಶವೊಂದು ಸೆಂಟ್ರಲ್ ಕಾಲೇಜ್ ಸೆನೆಟ್ ಹಾಲ್‌ನಲ್ಲಿ ಜರುಗಿತು. 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು, ನಾಗರೀಕರು ಭಾಗವಹಿಸಿದ್ದರು.

ಸಮಾವೇಶವನ್ನು ಸಹಶಿಕ್ಷಕರ ಸಂಘದ ನಾಯಕರಾದ ಎಲೆರುದ್ರಸ್ವಾಮಿಯವರು ಉದ್ಘಾಟಿಸಿದರು. ತರಗತಿಗಳು, ಪರೀಕ್ಷಾಕ್ರಮಗಳು ವಿದ್ಯಾರ್ಥಿಗಳಿಗೆ ಭಯವನ್ನುಂಟು ಮಾಡುವ ಕೇಂದ್ರಗಳಾಗಿವೆ, ಶಿಕ್ಷಕ ವಿದ್ಯಾರ್ಥಿಗಳ ಸಂಬಂಧ ದೂರವಾಗುತ್ತಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಜೈಲಾಧಿಕಾರಿಗಳ ರೀತಿ ಕಾಣುವುದರಲ್ಲಿ ಅತಿಶಯವಿಲ್ಲವೆಂದ ಅವರು ಶಿಕ್ಷಣ ರಂಗದಲ್ಲಿ ತೀವ್ರತರವಾದ ಪ್ರಜಾಪ್ರಭುತ್ವೀಕರಣವಾಗಬೇಕಿದೆ. ಈ ದಿಸೆಯಲ್ಲಿ ಚರ್ಚೆ ಆರಂಭಿಸಲು ಸಮಾವೇಶ ಸ್ವಾಗತಾರ್ಹವಾದುದು ಎಂದು ನುಡಿದರು.

ಅತಿಥಿಗಳಾಗಿ ಆಗಮಿಸಿದ್ದ ಜಿ.ಎನ್. ನಾಗರಾಜ್‌ರವರು ಮಾತನಾಡುತ್ತಾ ಶಿಕ್ಷಣ ಮತ್ತು ಸಮಾಜ ಹಾಗೂ ಆರ್ಥಿಕ ಸ್ಥಿತಿಗತಿಗಳ ನಡುವಿನ ಸೂಕ್ಷ್ಮ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸುತ್ತಾ ಖಾಸಗೀ ಸಂಸ್ಥೆಗಳು ನಾಯಿ ಕೊಡೆಗಳಂತೆ ಬೆಳೆಯುತ್ತಿದ್ದು ಇವು ಸುಲಿಗೆಯ ಕೇಂದ್ರಗಳಾಗಿವೆ. ಸರ್ಕಾರ ಪ್ರಾಥಮಿಕ ಪ್ರೌಢಶಾಲಾ ಶಿಕ್ಷಣಗಳನ್ನು ತೆರೆಯದೆ ಖಾಸಗೀಕರಣಕ್ಕೆ ಪ್ರೋತ್ಸಾಹಿಸುತ್ತಿವೆ ಎನ್ನುತ್ತಾ ಕೇಂದ್ರದ ನೂತನ ಶಿಕ್ಷಣ ನೀತಿ, ಶಿಕ್ಷಣ ರಂಗದಲ್ಲಿ ಉಳ್ಳವರು ನಿರ್ಗತಿಕರೆಂಬ ಎರಡು ಬೇಧಗಳನ್ನು ಸೃಷ್ಟಿ ಮಾಡುತ್ತದೆನ್ನುತ್ತಾ ಈ ತಾರತಮ್ಯದ ವಿರುದ್ಧ ಹೋರಾಡಲೂ ಕರೆ ನೀಡಿದರು.

ಅತಿಥಿಗಳಾಗಿದ್ದ ಎಸ್.ಎಫ್.ಐ. ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ಆರ್. ಆರಾಧ್ಯರವರು ಮಾತನಾಡುತ್ತಾ ಕೇಂದ್ರ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ವೆಚ್ಚ ಮಾಡದೇ ಮಲತಾಯಿ ಧೋರಣೆ ಅನುಸರಿಸುತ್ತಿರುವುದನ್ನು ಖಂಡಿಸಿ, ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಬೇಕೆಂದರು.

ರಾಜ್ಯ ಕಾರ್ಯದರ್ಶಿ ಎಸ್. ವೈ. ಗುರುಶಾಂತ್‌ರವರು ಇಂದಿನ ಪಠ್ಯಕ್ರಮ ಅತೀ ಹೊರೆಯಾಗಿದೆ. ಇಂಗ್ಲೀಷ್ ಹಿಂದಿಯ ಕಲಿಕೆಯನ್ನು ಹೇರಲಾಗುತ್ತಿದೆ. ಇಂಗ್ಲೀಷ್‌ಗೆ ಈಗಿರುವ ಸ್ಥಾನಮಾನವನ್ನು ತೊಲಗಿಸಿ ಮಾತೃಭಾಷೆಯಲ್ಲೇ ಶಿಕ್ಷಣ ನೀಡಬೇಕೆಂದೂ- ಒಂದು ಐಚ್ಛಿಕ ಭಾಷೆಯ ಸ್ಥಾನ ನೀಡಬೇಕೆನ್ನುತ ಮೂಢನಂಬಿಕೆ, ಕಂದಾಚಾರ, ವರ್ಗ–ಜಾತಿ ವೈರುಧ್ಯಗಳನ್ನು ಕಲಿಸುವ ಶಿಕ್ಷಣ ಬದಲಾಗಬೇಕೆಂದು ಒತ್ತಾಯಿಸುತ್ತದೆ. ಈ ದಿಸೆಯಲ್ಲಿ ಹೋರಾಟ ಇನ್ನೂ ವ್ಯಾಪಕಗೊಳ್ಳಬೇಕೆಂದರು.

ಸಮಾವೇಶಕ್ಕೆ ಶುಭ ಕೋರಿ ಉಪಾಧ್ಯಾಯರುಗಳು, ಕಾರ್ಮಿಕರ ಮುಖಂಡರುಗಳು ಮಾತನಾಡಿದರು.

ಅಧ್ಯಕ್ಷತೆಯನ್ನು ಶ್ರೀಧರ್ ಮೂರ್ತಿ ವಹಿಸಿದ್ದರು.

ಹಿರೋಷಿಮಾ ದಿನಾಚರಣೆ

ಬೆಂಗಳೂರು ನಗರದ ರಾಜಗೋಪಾಲ ನಗರದಲ್ಲಿ ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. ಮತ್ತು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಆಶ್ರಯದಲ್ಲಿ ಆಗಸ್ಟ್ 9 ರಂದು ಹಿರೋಷಿಮಾ ನಾಗಸಾಕಿ ದಿನಾಚರಣೆಯ ಅಂಗವಾಗಿ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಶ್ರೀ ಕರಗಯ್ಯ ಅಧ್ಯಕ್ಷತೆ ವಹಿಸಿದ್ದರು. ಜಗತ್ತಿನಲ್ಲಿ ಉಂಟಾಗಿರುವ ಸಾಮ್ರಾಜ್ಯಶಾಹಿಗಳ ಯುದ್ಧ ಬೆದರಿಕೆಯ ಬಗ್ಗೆ ವಕೀಲರಾದ ಶಂಕರಪ್ಪ, ಡಿ.ವೈ.ಎಫ್.ಐ. ಮುಖಂಡರುಗಳಾದ ನಾಗಮೋಹನ್‌ದಾಸ್, ಎಸ್. ಶಿವರಾಂ, ಆರ್. ಜಯಕುಮಾರ್, ಮಹಿಳಾ ಸಂಘಟನೆಯ ಶಾಂತಕುಮಾರಿರವರುಗಳು ಮಾತನಾಡಿದರು. ಘಟಕದ ಕಾರ್ಯದರ್ಶಿ ರಾಮಚಂದ್ರರವರು ಸ್ವಾಗತಿಸಿ, ವೆಂಕಟೇಶ ವಂದಿಸಿದರು. ಶ್ರೀರಾಮಪುರದ 'ಸಮುದಾಯ' ಘಟಕದವರಿಂದ 'ಹೆಣ್ಣು' ಎಂಬ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಸೆಪ್ಟೆಂಬರ್ 9 'ಶಿಕ್ಷಣ ಉಳಿಸಿ' ಎಸ್. ಎಫ್. ಐ. ರಾಜ್ಯ ಸಮಾವೇಶ ಯಶಸ್ವಿಗೊಳಿಸಿ

ಭಾರತೀಯ ಶಿಕ್ಷಣರಂಗವು ತೀವ್ರತರವಾದ ಬಿಕ್ಕಟ್ಟನ್ನು ಎದುರಿಸುತ್ತಿದ್ದು ಇಂತಹ ಸ್ಥಿತಿಯಲ್ಲಿ ಕೇಂದ್ರದ ರಾಜೀವ್‌ಗಾಂಧಿ ಸರ್ಕಾರದ 21ನೆಯ ಶತಮಾನದ ಕರೆಯೊಂದಿಗೆ ಶಿಕ್ಷಣ, ಉದ್ಯೋಗದ ಹಕ್ಕಿಗೆ ಕೊಡಲಿಯೇಟು ಹಾಕುವಂತಹ ಶಿಕ್ಷಣ ನೀತಿಗಳನ್ನು ಅನುಸರಿಸ ತೊಡಗಿದೆ. ಈಗ ತರುತ್ತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–86 ನ್ನು ಜಾರಿಗೊಳಿಸಲಾಗುತ್ತಿದ್ದು ಈಗಾಗಲೇ ದುಸ್ಥಿತಿಯಲ್ಲಿರುವ ಶಿಕ್ಷಣ ನೀತಿಯನ್ನು ಇನ್ನೂ ಹಾಳುಗೆಡವಲಿದೆ. ಜನರ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಕ್ರೂರ ನಗ್ನ ದಾಳಿ ನಡೆಸತೊಡಗಿದೆ. ಹಲವಾರು ಜಟಿಲ ಸಮಸ್ಯೆಗಳಲ್ಲಿ ಸಿಲುಕಿರುವ ಕರ್ನಾಟಕ ರಾಜ್ಯ ಶಿಕ್ಷಣವು ಇದರಿಂದ ಇನ್ನೂ ತತ್ತರಿಸಲಿದೆ.

ಶಿಕ್ಷಣವನ್ನು ಉಳಿಸಿಕೊಳ್ಳುವ ಹಾಗೂ ಗಳಿಸಿಕೊಳ್ಳುವ ಹಿನ್ನೆಲೆಯಲ್ಲಿ ನೂತನ ಶಿಕ್ಷಣ ನೀತಿ ಅದರ ಜಾರಿಯ ಅಪಾಯಗಳ ಕುರಿತಂತೆ ವ್ಯಾಪಕ ಚರ್ಚೆ, ಹೋರಾಟ ನಡೆಸುವ ಪೂರ್ವ ಭಾವಿಯಾಗಿ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಲು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯು ನಿರ್ಧರಿಸಿದೆ. ಈ ಸಮಾವೇಶವು 1988 ಸೆಪ್ಟಂಬರ್ 9 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಜರುಗಲಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 1200 ಕ್ಕೂ ಅಧಿಕ ವಿದ್ಯಾರ್ಥಿ ಕಾರ್ಯಕರ್ತರು ಪಾಲ್ಗೊಳ್ಳಲಿರುವ ಈ ಸಮಾವೇಶವನ್ನು ಪ. ಬಂಗಾಳದ ಶಿಕ್ಷಣ ಸಚಿವರಾದ ಕಾಂತಿ ಬಿಸ್ವಾಸ್‌ರವರು ಉದ್ಘಾಟಿಸಲಿದ್ದಾರೆ. ಅಲ್ಲದೇ ರಾಜ್ಯ ಸಚಿವರು, ಶಿಕ್ಷಣ ತಜ್ಞರು ಹಾಗೂ ಎಸ್.ಎಫ್.ಐ. ಅಖಿಲ ಭಾರತ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಸಮಾವೇಶದ ಯಶಸ್ವಿಗಾಗಿ ಸಿದ್ಧತಾ ಸಮಿತಿಯನ್ನು ರಚಿಸಲಾಗಿದ್ದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾ॥ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರಾಗಿಯೂ ಕಾ॥ ಎಸ್. ವೈ. ಗುರುಶಾಂತ್ ಕಾರ್ಯದರ್ಶಿಯಾಗಿಯೂ ವಿವಿಧ ವಿಭಾಗಗಳ ಹಾಗೂ ಸಂಘಟನೆಗಳ ಪ್ರತಿನಿಧಿಗಳು ಸಮಿತಿಯಲ್ಲಿದ್ದಾರೆ. ವ್ಯಾಪಕ ಸಿದ್ಧತೆಗಳು ನಡೆದಿದೆ.

ಸೆಪ್ಟೆಂಬರ್ ಚಳುವಳಿಯತ್ತ ರೈತ ಸಂಘ...

ಕುಂದಾಪುರ ವಿಸ್ತೃತ ಸಭೆ

ರೈತರು ಉಳುಮೆ ಮಾಡುತ್ತಿರುವ ಭೂಮಿ ಸಕ್ರಮಗೊಳಿಸಬೇಕು, ಬೆಳೆಗೆ ಲಾಭದಾಯಕ ಬೆಲೆ ನೀಡಬೇಕು, ಕನಿಷ್ಟ ವೇತನ ಜಾರಿಗೆ ತರಬೇಕು ಮುಂತಾದ ಬೇಡಿಕೆ ಒತ್ತಾಯಿಸಿ ನಡೆಯುವ ಜೈಲ್ ಬರೋ ಚಳುವಳಿಯನ್ನು ಕುಂದಾಪುರದಲ್ಲಿ ಯಶಸ್ವಿಗೊಳಿಸಲು ಜುಲೈ 24 ರಂದು ಸೇರಿದ್ದ ವಿಸ್ತೃತ ಸಭೆಯಲ್ಲಿ ತೀರ್ಮಾನಿಸಲಾಯಿತು. ರೈತ ಸಂಘದ ತಾಲೋಕು ಕಾರ್ಯದರ್ಶಿ ಕಾ|| ದಾಸ ಭಂಡಾರಿಯವರು ಚಳುವಳಿಯ ಮಹತ್ವದ ಬಗ್ಗೆ ವಿವರಿಸಿದರು. ತಾಲೋಕು ಕಛೇರಿ ಪಿಕೆಟಿಂಗ್ ನಡೆಸಿ ಪ್ರತಿ ದಿನ ಬಂಧನಕ್ಕೊಳಗಾಗುವರೆಂದು ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ರೈತ ಸಂಘದ ಅಧ್ಯಕ್ಷ ಕಾ|| ಶಿವರಾಮಶೆಟ್ಟಿಯವರು ವಹಿಸಿದ್ದರು.

ದ. ಕ. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ|| ಅಬ್ರಹಾಂ ಕರ್ಕಡ ಹೆಂಚಿನ ಕಾರ್ಮಿಕರ ಸಂಘದ ಅಧ್ಯಕ್ಷ ವಿ. ನರಸಿಂಹರವರುಗಳು ಮಾತನಾಡಿದರು. ಕುಂದಾಪುರದ ಮುದೂರಿನಲ್ಲಿ ಅರಣ್ಯ ನಾಶವನ್ನು ತಡೆಗಟ್ಟಬೇಕೆಂದು ಒತ್ತಾಯಿಸುವ ನಿರ್ಣಯ ಸ್ವೀಕರಿಸಲಾಯಿತು.

ಒಕ್ಕಲೆಬ್ಬಿಸುವುದರ ವಿರುದ್ಧ ರೈತರ ಸಭೆ

ಬೆಳಗಾಂ ಜಿಲ್ಲೆ ಸವದತ್ತಿ ತಾಲೋಕಿನ ಮುನವಳ್ಳಿ ವಿಭಾಗದಲ್ಲಿ 10-20 ವರ್ಷಗಳಿಂದ ಸರ್ಕಾರದ ಕಂದಾಯ ಭೂಮಿ ಹಾಗೂ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರನ್ನು ಅರಣ್ಯಾಧಿಕಾರಿಗಳು ಒಕ್ಕಲೆಬ್ಬಿಸುವುದರ ವಿರುದ್ಧ ಜುಲೈ 12 ರಂದು ಗೊಂದಿ ಗ್ರಾಮದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು.

ಕಾ|| ಜಿ. ಬಿ. ತೋರಗಲ್ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾ|| ಎಲ್. ಎಸ್. ನಾಯಕ್, ಎಫ್. ಎಂ. ನದಾಫ್, ಶ್ರೀಕಾಂತ್ ಹಟ್ಟಿಹಳ್ಳಿ, ಶಂಭು ತೊನ್ನಾದ ಹಾಗೂ ಪಿ. ಡಿ. ಸಕ್ರಿಯವರು ಮಾತನಾಡಿದರು. ನೂತನ ಗೊಂದಿ ಗ್ರಾಮ ಘಟಕಕ್ಕೆ ಅಡಿವೆಪ್ಪ ಕಮಟಗಿ (ಅಧ್ಯಕ್ಷ) ಗಂಗಪ್ಪ ದಂಡಿನ (ಉಪಾಧ್ಯಕ್ಷ) ಪಿ. ಡಿ. ಸಕ್ರಿ (ಕಾರ್ಯದರ್ಶಿ) ಶ್ರೀಶೈಲ ಗುದಗಾಪೂರ (ಸಹ ಕಾರ್ಯದರ್ಶಿ) ರಾಮಪ್ಪ ದಂಡಿನ (ಖಜಾಂಚಿ) ಯವರನ್ನೊಳಗೊಂಡ 11 ಜನರ ಸಮಿತಿ ರಚಿಸಲಾಯಿತು.

ಮಾವಳಂಗಿ ರೈತರ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ಜೋಯಿಡಾ (ಸುಪಾ) ತಾಲೋಕು ಮಾವಳಂಗಿ ಗ್ರಾಮದಲ್ಲಿ ರೈತರ ಸಭೆ ಆಗಸ್ಟ್ 1 ರಂದು ನಡೆದು ಕಾ|| ರಾಜಾರಾಮ ಕೃಷ್ಣ ಗುಡೆ ಅಧ್ಯಕ್ಷತೆ ವಹಿಸಿದ್ದರು. ಕಾ|| ಗುರುಪಾದ ಮುರಾಶಿಯವರು ಮಾತನಾಡಿ ಸೆಪ್ಟೆಂಬರ್ 1 ರಿಂದ 15 ರವರೆಗೆ ನಡೆಯುವ ಅಖಿಲ ಭಾರತ ಪಿಕೆಟಿಂಗ್ ಚಳುವಳಿ ಕುರಿತು ವಿವರಿಸಿದರು. ಗ್ರಾಮದ ಹರಿಜನ-ಗಿರಿಜನರ ಜಮೀನು ಸರ್ವೆ ಮಾಡದೆ ಅನ್ಯಾಯವೆಸಗಿರುವುದರ ಕುರಿತು ಹೋರಾಟ ರೂಪಿಸಲು ನಿರ್ಣಯ ಸ್ವೀಕರಿಸಲಾಯಿತು. ಕಾ|| ಅಶೋಕರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಕಾ|| ಭೀಮಸಿ ಕಲಾದಗಿಯವರಿಗೆ ಸತ್ಕಾರ

ಬಿಜಾಪುರ ಜಿಲ್ಲಾ ಕುರುಬರ ಸೊಸೈಟಿ ಜೂನ್ 26 ರಂದು ಕಾಳಿದಾಸ ಭವನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರು, ರಾಜ್ಯ ಕೃಷಿ ಕೂಲಿಗಾರರ ಸಂಘದ ರಾಜ್ಯ ಅಧ್ಯಕ್ಷರು ಆದ ಕಾ|| ಭೀಮಸಿ ಕಲಾದಗಿಯವರಿಗೆ ಸತ್ಕಾರ ಸಮಾರಂಭವೊಂದನ್ನು ನಡೆಸಿದರು.

ಬಡತನದ ಬವಣೆಯ ಬಿಜಾಪುರ ಜನತೆಯನ್ನು ಸಂಘಟಿಸಿ ಅವರ ಜೀವನದಲ್ಲಿ ಹೊಸ ಆಸೆಯ ಕಿರಣ ಮೂಡಿಸಿದ ಕಾ|| ಭೀಮಸಿ ಕಲಾದಗಿ ಈ ಹೋರಾಟವನ್ನು ಇಂದು ರಾಜ್ಯ ಮಟ್ಟಕ್ಕೆ ಏರಿಸಿ ರೈತ ಸಂಘ ಹಾಗೂ ಕೃಷಿ ಕೂಲಿಗಾರರ ಸಂಘದ ರಾಜ್ಯ ನಾಯಕರಾಗಿ ದುಡಿಯುತ್ತಿದ್ದಾರೆಂದು ಅವರ ಕುರಿತು ಮಾತನಾಡಿದ ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕರಾದ ಕಾ|| ಎಸ್. ಕೆ. ಉಪಾಧ್ಯಾಯರು ಹೇಳಿದರು.

ಮುಖ್ಯ ಅತಿಥಿಗಳಾಗಿ ಸರ್ಜನ್ ಶ್ರೀ ಎಂ. ಎನ್. ನಾಗೇಂದ್ರಪ್ಪನವರು ಮಾತನಾಡಿ ಕಲಾದಗಿಯವರ ಸಂಘಟನಾ ವೈಖರಿಯನ್ನು ಕೊಂಡಾಡಿದರು. ರಣರಂಗ ಪತ್ರಿಕೆಯ ನಾರನಾಡ, ಮನ್ನು ಸಾಬ ಕಲಾದಗಿ, ಹಂದ್ರಾಳ, ಚಟ್ಟರಕಿಯವರು ಶುಭಕೋರಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ-ಯುವಜನ ಮಹಿಳೆಯರು ರೈತರು ಸಮಾರಂಭದಲ್ಲಿ ಭಾಗವಹಿಸಿದ್ದರು. ಕಲಾದಗಿ ಮಾಸ್ತರ ಸ್ವಾಗತಿಸಿ ನಿಂಗಪ್ಪ ಹೊಸಮನಿ ಮಾಸ್ತರ ವಂದಿಸಿದರು.

ಸಿಂಧನೂರು ತಾಲ್ಲೋಕು ಸಮ್ಮೇಳನ

ಸಿ.ಪಿ.ಐ.(ಎಂ) ಪಕ್ಷದ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೋಕು ಸಮ್ಮೇಳನ ಆಗಸ್ಟ್ 13, 14 ರಂದು ನಡೆಯಿತು. ತಾಲ್ಲೋಕು ಕಾರ್ಯದರ್ಶಿ ಕಾ|| ಬಿ.ಲಿಂಗಪ್ಪ ಧ್ವಜಾರೋಹಣ ಮಾಡಿದರು. ಎ.ಪಿ.ಎಂ.ಸಿ. ಭವನದಲ್ಲಿ ನಡೆದ ಸಮ್ಮೇಳನವನ್ನು ಪಕ್ಷದ ರಾಜ್ಯಸಮಿತಿ ಸದಸ್ಯರು ಜಿಲ್ಲಾ ಕಾರ್ಯದರ್ಶಿಯವರಾದ ಕಾ|| ಚಂದ್ರಶೇಖರ ಬಾಳೆಯವರು ಉದ್ಘಾಟಿಸಿದರು. ರಾಷ್ಟ್ರೀಯ-ಅಂತರರಾಷ್ಟ್ರೀಯ ಪರಿಸ್ಥಿತಿ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಪಕ್ಷ ಅನುಸರಿಸುತ್ತಾ ಬಂದಿರುವ ನಿಲುವುಗಳ ಕುರಿತು ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ|| ಪುರುಷೋತ್ತಮಕಲಾಲ್ ಬಂಡಿಯವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಮುಂಬರುವ ಜವಾಬ್ದಾರಿ ಅರಿತು ಜನತೆಯ ಬಲಿಷ್ಠ ಚಳುವಳಿ ಬೆಳೆಸಲು ಕರೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾ|| ಬಿ. ಲಿಂಗಪ್ಪ ವಹಿಸಿ ಕಾ||ಕೆ.ಬಸವರಾಜ ಸ್ವಾಗತಿಸಿ ಶೇಷಾದ್ರಿಯವರು ವಂದಿಸಿದರು.

ಎಸ್. ಎಫ್. ಐ. ಸುದ್ದಿಗಳು

ಬೇಡಿಕೆಗೆ ಒತ್ತಾಯಿಸಿ ಜಿಲ್ಲೆಯಾದ್ಯಂತ ಪ್ರದರ್ಶನ

ಎಸ್.ಎಫ್.ಐ. ರಾಜ್ಯ ಸಮಿತಿ ಕರೆಯಂತೆ ಬಳ್ಳಾರಿ ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳ ಬೇಡಿಕೆಗಳಿಗಾಗಿ ಒತ್ತಾಯಿಸಿ ಮೆರವಣಿಗೆ, ಮತ ಪ್ರದರ್ಶನ ನಡೆಸಲಾಗಿದೆ. ಹಾಸ್ಟೆಲ್ ಸೌಲಭ್ಯ ವಿದ್ಯಾರ್ಥಿ ವೇತನದ ಏರಿಕೆ, ಹೈಸ್ಕೂಲ್ ವಿದ್ಯಾರ್ಥಿಗಳ ಬೇಡಿಕೆಗಳು ಹಾಗೂ ಸ್ಥಳೀಯ ಸಮಸ್ಯೆಗಳ ಕುರಿತು ನಡೆದ ಪ್ರದರ್ಶನದಲ್ಲಿ ಹೊಸಪೇಟೆಯಲ್ಲಿ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು. ಬಳ್ಳಾರಿಯಲ್ಲಿ 400 ವಿದ್ಯಾರ್ಥಿಗಳು ಮತಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು. ತೋರಣಗಲ್ಲಿನಲ್ಲಿ 100 ಮಂದಿ ನಾಡ ಕಛೇರಿಗೆ ತೆರಳಿ ಮನವಿ ಅರ್ಪಿಸಿದರು. ಸಿರಗುಪ್ಪದಲ್ಲಿ 250 ಮಂದಿ ಹರಪ್ಪನಹಳ್ಳಿಯಲ್ಲಿ ಮೆರವಣಿಗೆ ನಡೆಸುವುದರ ಮೂಲಕ ಯಶಸ್ವಿಯಾಗಿ ಕಾರ್ಯಕ್ರಮ ನಡೆಸಲಾಗಿದೆ ಎಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ|| ಎಲ್. ಮಂಜುನಾಥ್‌ರವರು ತಿಳಿಸಿದ್ದಾರೆ.

ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ಖಂಡನೆ

ಬಿಜಾಪುರ ಅಲ್ ಅಮೀನ್ ಮೆಡಿಕಲ್ ಕಾಲೇಜಿನಲ್ಲಿ ಹಾಸ್ಟಲ್ ಸೌಲಭ್ಯ, ಸ್ವತಂತ್ರ ದವಾಖಾನೆ, ಸಾರಿಗೆ ಬಸ್ಸಿನ ಅನುಕೂಲ ಮುಂತಾದ ಮತ್ತಿತರ ಬೇಡಿಕೆಗೆ ಒತ್ತಾಯಿಸಿದ ವೈದ್ಯ ವಿದ್ಯಾರ್ಥಿಗಳ ಮೇಲೆ ಲಾಠಿಚಾರ್ಜ್ ನಡೆಸಿರುವುದನ್ನು ಎಸ್.ಎಫ್.ಐ., ಡಿ.ವೈ.ಎಫ್.ಐ. ಹಾಗೂ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳು ತೀವ್ರವಾಗಿ ಖಂಡಿಸಿವೆ. ವೈದ್ಯ ವಿದ್ಯಾರ್ಥಿಗಳು ನಡೆಸಿದ ಹೋರಾಟ, ಮೆರವಣಿಗೆಗಳಲ್ಲಿ ಪಾಲ್ಗೊಂಡು ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಬಹಿರಂಗ ಸಭೆಯಲ್ಲಿ ಕಾ|| ಮನ್ನುಸಾಬ ಕಲಾದಗಿ, ಶ್ರೀಧರ ಕುಲಕರ್ಣಿ, ಯವರುಗಳು ಮಾತನಾಡಿ ಕ್ಯಾಪಿಟೇಶನ್ ಡೊನೇಶನ್ ವಸೂಲಿ ಮಾಡಿ ಕನಿಷ್ಠ ಸೌಲಭ್ಯವನ್ನು ಒದಗಿಸದೇ ಇರುವ ಕಾಲೇಜಿನ ಆಡಳಿತ ವರ್ಗದ ನೀತಿಯನ್ನು ತೀವ್ರವಾಗಿ ಖಂಡಿಸಲಾಯಿತು.

ಸೌಲಭ್ಯಕ್ಕೆ ಒತ್ತಾಯ

ಗುಲ್ಬರ್ಗಾ ಜಿಲ್ಲೆ ಸುರಪುರದಲ್ಲಿರುವ ಶ್ರೀ ಪ್ರಭು ಕಲಾ.ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಜುಲೈ 18 ರಂದು ತಮ್ಮ ಕಾಲೇಜಿನ ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳಾದ ವಿದ್ಯಾರ್ಥಿ ಸಂಘದ ಚುನಾವಣೆ, 40 ವಿದ್ಯಾರ್ಥಿಗೆ ಒಂದು ತರಗತಿ ಉಪನ್ಯಾಸಕರ ನೇಮಕ, ಹಾಸ್ಟೆಲ್ ಸೌಲಭ್ಯವನ್ನು ಒತ್ತಾಯಿಸಿ ಪ್ರಿನ್ಸಿಪಾಲರಿಗೆ ಮನವಿ ಅರ್ಪಿಸಲಾಗಿದೆ. ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತರಗತಿ ಬಹಿಷ್ಕರಿಸಿ ಮುಷ್ಕರ ನಡೆಸಲಾಗಿದೆ ಎಂದು ಶಾಖೆಯ ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು ತಿಳಿಸಿ ಬೇಡಿಕೆ ಈಡೇರದಿದ್ದರೆ ಅನಿರ್ದಿಷ್ಟ ಬಹಿಷ್ಕಾರ ನಡೆಸಲಾಗುವುದೆಂದು ಎಚ್ಚರಿಸಲಾಗಿದೆ.

ವಿದ್ಯಾರ್ಥಿಗಳ ಸಭೆಯನ್ನುದ್ದೇಶಿಸಿ ಗುರು ಗೋನಾಲ, ಶ್ರೀನರಸಿಂಹರಾಠೋಡ ಮಾತನಾಡಿದರು. ಕಾ|| ಹಣಮಂತಕಾವಲಿ, ಸೈಯದ್ ಇಬ್ರಾಹಿಂ ಜಮಾದಾರ, ಶರಣಪ್ಪ ಅನಸೂರ ಮುಂತಾದವರು ನೇತೃತ್ವ ನೀಡಿದರು.

ಪಂಚ್ ಪದ್ಧತಿ ರದ್ದಿಗೆ ಒತ್ತಾಯ

ವಿದ್ಯಾರ್ಥಿಗಳ ಬಸ್ ಪಾಸ್ ಪಂಚ್ ಮಾಡುವ ಪದ್ಧತಿ ಕೈಬಿಡಬೇಕೆಂದು ಎಸ್.ಎಫ್.ಐ. ಹುಬ್ಬಳ್ಳಿ ಘಟಕದ 500 ಕ್ಕೂ ಹೆಚ್ಚು ಕಾರ್ಯಕರ್ತರು ಮೆರವಣಿಗೆ ನಡೆಸಿ ಬಸ್ ತಡೆ ಚಳುವಳಿಯನ್ನು ನಡೆಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಪ್ರ. ಕಾರ್ಯದರ್ಶಿ ಸೋಮೇಶ್ ಸರವಳೆ, ಈರಣ್ಣಾ ಅಂಚಟಗೇರಿ. ಬಾದಾಮಿ ಪೂಜಾರ್, ಹಾಗೂ ಹುಲ್ಲೂರರವರುಗಳು ವಹಿಸಿದ್ದರು.

ಕೆ. ಎಸ್. ಆರ್. ಟಿ. ಸಿ. ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಬೇಡಿಕೆಗಳ ಮನವಿ ಅರ್ಪಿಸಿ ಸಭೆ ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ವಿದ್ಯಾರ್ಥಿ ಮುಖಂಡರು ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವೈಜ್ಞಾನಿಕ ಪ್ರಜ್ಞೆ ಬೆಳೆಸಿಕೊಳ್ಳಲು ಕರೆ

ಆಗಸ್ಟ್ 15 ರಂದು ಸ್ವಾತಂತ್ರ್ಯೋತ್ಸವದ ದಿನ ತುಮಕೂರಿನ ಎಸ್.ಎಫ್.ಐ. ಜಿಲ್ಲಾ ಘಟಕದ ಆಶ್ರಯದಲ್ಲಿ ಪದವಿ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭಾವೈಕ್ಯತೆ ಗೀತೆಗಳ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ಕವಿ ಗೋಷ್ಠಿಯೊಂದನ್ನು ಏರ್ಪಡಿಸಲಾಗಿತ್ತು.

ಕಾಳಿದಾಸ ಕಿರಿಯ ಕಾಲೇಜು ಉಪನ್ಯಾಸಕರಾದ ಜಿ. ರಾಮಪ್ರಸಾದ್‌ರವರು ಮಾತನಾಡಿ ಕವಿಗೆ ಸಾಮಾಜಿಕ ಪ್ರಜ್ಞೆ ಅವಶ್ಯಕ, ಬರಹಗಾರನಿಗೆ ಕಲ್ಪನೆ ಅತಿಮುಖ್ಯ ಅದನ್ನು ರಸವತ್ತಾಗಿ ಹೊರಹೊಮ್ಮಿಸಬೇಕು, ರಾಜರ ಆಸ್ಥಾನದಲ್ಲಿದ್ದ ಸಾಹಿತ್ಯ ಸಮಾಜದ ಎಲ್ಲಾ ಸ್ತರಗಳಲ್ಲೂ ಬೆಳೆದು ಬರಬೇಕೆಂದು ಹಾಗೂ ಅದು ವೈಜ್ಞಾನಿಕ ನೆಲೆಗಟ್ಟಿನ ಮೇಲೆ ರಚನೆಗೊಳ್ಳಬೇಕೆಂದು ಅವರು ಕರೆ ನೀಡಿದರು,

ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಇ. ಬಸವರಾಜು ಸ್ವಾತಂತ್ರ್ಯ ದಿನದ ಕುರಿತು ಮಾತನಾಡಿ ಆರ್ಥಿಕ, ಸಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಗಾಗಿ ಜನತೆ ಹೋರಾಟ ನಡೆಸಬೇಕೆಂದು ಕರೆನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಖ್ಯಾತಕವಿ ಎಸ್.ಜಿ. ಸಿದ್ದರಾಮಯ್ಯನವರು ಶಿಕ್ಷಣದಲ್ಲಿ ಮೂಢನಂಬಿಕೆಯನ್ನು ತುಂಬಲಾಗುತ್ತಿದೆ. ಟಿ. ವಿ. ರಾಮಾಯಣದ ಬಗ್ಗೆ ಜನರಲ್ಲಿ ಒಲವು ವೈಚಾರಿಕತೆಯ ಕೊರತೆಯನ್ನು ತೋರಿಸುತ್ತದೆ ಎಂದರು.

ವಿದ್ಯಾವಾಹಿನಿ ಕಾಲೇಜು ಉಪನ್ಯಾಸಕರಾದ ಸೋ.ಮು. ಭಾಸ್ಕರಾಚಾರ್‌ರವರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಕವಿಗೋಷ್ಠಿಯಲ್ಲಿ ಹಲವಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಕರಿಯಣ್ಣನವರಿಂದ ಸ್ವಾಗತ ವಿ. ಆರ್. ನಾಗರಾಜ್‌ರವರಿಂದ ವಂದನಾರ್ಪಣೆಯೊಂದಿಗೆ ಸಮಾರಂಭ ಮುಕ್ತಾಯಗೊಂಡಿತು.

ರಾಜೀವ್ ಸರ್ಕಾರದ ವಿರುದ್ಧ ಹೋರಾಟದಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಕರೆ

ಜನತೆಯ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ವಿಫಲವಾಗಿರುವ ರಾಜೀವಗಾಂಧಿ ಸರ್ಕಾರದ ವಿರುದ್ಧ ಮೂಡಿಬರುತ್ತಿರುವ ಸಾರ್ವತ್ರಿಕ ಹೋರಾಟದಲ್ಲಿ ವಿದ್ಯಾರ್ಥಿಗಳೂ ಪಾಲ್ಗೊಳ್ಳಬೇಕೆಂದು ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷ ಕಾ|| ಎ. ವಿಜಯರಾಘವನ್ ಕರೆ ನೀಡಿದ್ದಾರೆ. ಅವರು ದಿನಾಂಕ : 6-7-1988 ರಂದು ಹರಿಹರದಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಎಸ್. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯು ಏರ್ಪಡಿಸಿದ್ದ 5 ದಿನಗಳ ಅಧ್ಯಯನ ಶಿಬಿರದ ಅಂಗವಾಗಿ ಈ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು.

ಚುನಾವಣೆಯ ಲಾಭಕ್ಕಾಗಿ ಕೋಮುವಾದಿ-ಛಿದ್ರಕಾರಿ ಪಕ್ಷಗಳೊಂದಿಗೆ ಸೇರಿಕೊಳ್ಳುವ ಕಾಂಗ್ರೆ ಪಕ್ಷದ ಕೇಂದ್ರ ಸರ್ಕಾರವು ದೇಶದ ಐಕ್ಯತೆ ಸಮಗ್ರತೆಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಹೇಳಿದ ಅವರು ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡಿ ದೇಶದ ಪ್ರಜಾಪ್ರಭುತ್ವಕ್ಕೆ ತೀವ್ರ ಗಂಡಾಂತರ ತಂದೊಡ್ಡಿದೆ ಎಂದರು.

ರಾಜೀವಗಾಂಧೀಯವರ ನೂತನ ಶಿಕ್ಷಣ ನೀತಿಯನ್ನು ಪ್ರಸ್ತಾಪಿಸಿದ ಅವರು ಅದು ಶಿಕ್ಷಣದ ಅವಕಾಶಗಳನ್ನು ಮೊಟಕುಗೊಳಿಸಿ ಅತ್ಯುತ್ತಮ ಮಟ್ಟದ ಶಿಕ್ಷಣವನ್ನು ಶ್ರೀಮಂತರ ಮಕ್ಕಳಿಗೆ ಕಾಯ್ದಿಡುವ ಕುತಂತ್ರವಾಗಿದೆ ಎಂದರು.

ಜನವಿರೋಧಿ ಕಾಂಗ್ರೆಸ್ (ಐ) ಸರ್ಕಾರವನ್ನು ಕಿತ್ತುಹಾಕಲು ರೈತರು, ಕಾರ್ಮಿಕರು ಮತ್ತು ಇತರ ಜನ ವಿಭಾಗಗಳು ನಡೆಸಿರುವ ಹೋರಾಟದಲ್ಲಿ ವಿದ್ಯಾರ್ಥಿಗಳೂ ಸೇರಿಕೊಂಡು ಕಾಂಗ್ರೆ ಸರ್ಕಾರಕ್ಕೆ ಒಂದು ಎಡ-ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ರೂಪಿಸುವಲ್ಲಿ ಒಂದು ಮುಖ್ಯ ಪಾತ್ರವನ್ನು ನಿರ್ವಹಿಸಬೇಕೆಂದು ಕರೆ ನೀಡಿದರು.

ಎಸ್.ಎಫ್.ಐ.ನ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಎಸ್. ವೈ. ಗುರುಶಾಂತಾ ಮಾತನಾಡುತ್ತಾ, ಮೌಲ್ಯ ಮಾಪನ ನಿರಾಕರಣೆ ಹಾಗೂ ಪರೀಕ್ಷೆಗಳಲ್ಲಿಯ ಅಕ್ರಮಗಳನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸುವ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಯನ್ನು ಕಟುವಾಗಿ ಟೀಕಿಸಿದರು. ತಮ್ಮ ಐಕ್ಯತೆಯನ್ನು ಕಾಪಾಡಿಕೊಂಡು ಹೋರಾಟ ನಡೆಸಿದ ರಾಜ್ಯದ ಸಹ-ಶಿಕ್ಷಕರನ್ನು ಅಭಿನಂದಿಸಿದ ಅವರು ಶಿಕ್ಷಕರ ನ್ಯಾಯಯುತವಾದ ಪ್ರತಿಯೊಂದು ಹೋರಾಟವನ್ನೂ ಎಸ್.ಎಫ್.ಐ. ಅವರನ್ನು ಬೆಂಬಲಿಸುವುದೆಂದು ಹೇಳಿದರು.

ಎಸ್.ಎಫ್.ಐ.ನ ರಾಜ್ಯ ಸಮಿತಿ ಅಧ್ಯಕ್ಷ ಜೆ. ಸಿ. ಬಯ್ಯಾರೆಡ್ಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಚಿತ್ರದುರ್ಗ ಜಿಲ್ಲಾ ಸಮಿತಿ ಅಧ್ಯಕ್ಷ ಎಂ.ಜಿ. ಗಂಗಾಧರ ಸ್ವಾಗತಿಸಿದರು. ಕೊನೆಯಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೃಷ್ಣಾಜಿ ಕಲಾಲ್ ವಂದಿಸಿದರು.

ಮೈಸೂರಿನ ಕೆ.ಆರ್. ಮಿಲ್ 3 ವರ್ಷಗಳಿಂದ ಮುಚ್ಚಿದೆ. 2500 ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ದಾವಣಗೆರೆಯ ಐದು ಗಿರಣಿಗಳು ಐದು ಸಾವಿರ ಕಾರ್ಮಿಕರ ಕೆಲಸ ಕಸಿದುಕೊಂಡಿವೆ. ರಾಜ್ಯದ ನಾಲ್ಕು ಸಹಕಾರೀ ನೇಯ್ಗೆ ಮಿಲ್‌ಗಳು ಐದು ಸಾವಿರ ಕಾರ್ಮಿಕರನ್ನು ಬೀದಿಪಾಲಾಗಿಸಿವೆ.

ಎನ್.ಟಿ.ಸಿ. ಗಿರಣಿಗಳೂ ತಮ್ಮ ಕಾರ್ಮಿಕರ ಮೇಲೆ, ಅವರ ಹಕ್ಕುಗಳ ಮೇಲೆ ಧಾಳಿ ನಡೆಸುತ್ತಿವೆ. ಏಕೆ ಈ ದಾಳಿ? ಏಕೆ ಈ ಬಿಕ್ಕಟ್ಟು? ಕಾರ್ಮಿಕರು ಏನು ಮಾಡಬೇಕು?

ಬೆಂಗಳೂರಿನಲ್ಲಿ ಜರುಗಿದ ಕರ್ನಾಟಕ ರಾಜ್ಯ ಜವಳಿ ಕಾರ್ಮಿಕರ ಸಮಾವೇಶದಲ್ಲಿ ಮಂಡಿಸಿದ ಈ ವಿಶ್ಲೇಷಣೆ ಅವಲೋಕಿಸಲು ಯತ್ನಿಸಿದೆ.

ಜವಳಿ ಉದ್ದಿಮೆಯಲ್ಲಿ ಬಿಕ್ಕಟ್ಟು

ಸಂಪೂರ್ಣ ರಾಷ್ಟ್ರೀಕರಣ

ಏಕೈಕ ಪರಿಹಾರ

—ಕಾ॥ ವಿ. ಜೆ. ಕೆ. ನಾಯರ್

ಭಾರತದಲ್ಲಿ ಜವಳಿ ಉದ್ದಿಮೆ ತೀವ್ರವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಬಿಕ್ಕಟ್ಟಿನ ಪರಿಣಾಮವಾಗಿ ಈಗಾಗಲೇ 2 ಲಕ್ಷಕ್ಕೂ ಮಿಗಿಲಾಗಿ ಕಾರ್ಮಿಕರು ಮಿಲ್ ವಿಭಾಗದಲ್ಲಿ ನಿರುದ್ಯೋಗಿಗಳಾಗಿದ್ದಾರೆ. 1988 ರ ಫೆಬ್ರುವರಿ ಕೊನೆಯ ವೇಳೆಗೆ 131 ಗಿರಣಿಗಳು ಮುಚ್ಚಲ್ಪಟ್ಟಿದ್ದವು. (ಕೋಷ್ಟಕ ನೋಡಿ) ಇದರಲ್ಲಿ ಮುಚ್ಚಿದೆ ಎಂದು ಘೋಷಿಸಿಕೊಳ್ಳದೇನೇ ಬಾಗಿಲು ಹಾಕಿರುವ ಗಿರಣಿಗಳನ್ನು ಸೇರ್ಪಡಿಸಿಲ್ಲ. ನಮಗೆ ತಿಳಿದಂತೆ 1988 ರ ಫೆಬ್ರವರಿ ಕೊನೆಯ ವೇಳೆಗೆ ಕರ್ನಾಟಕ 4 ಸಹಕಾರಿ ಗಿರಣಿಗಳು ಕೆಲಸ ನಿರ್ವಹಿಸುವುದನ್ನು ನಿಲ್ಲಿಸಿವೆ. ಸರ್ಕಾರಿ ಅಂಕಿ-ಸಂಖ್ಯೆಗಳ ರೀತ್ಯ ಒಟ್ಟು ಕೆಲಸ ಕಳೆದುಕೊಂಡಿರುವ ಕಾರ್ಮಿಕರ ಸಂಖ್ಯೆ 1,54,539 ಈ ಸಂಖ್ಯೆಯಲ್ಲಿ ಬದಲಿ ಕಾರ್ಮಿಕರು ಒಳಗೊಂಡಿಲ್ಲ. ಆದ್ದರಿಂದ ನಾವು ಈ ಸಂಖ್ಯೆ ಖಂಡಿತ 2 ಲಕ್ಷ ಮೀರಿದೆ ಎಂದು ಭಾವಿಸಬಹುದು. ದೀರ್ಘ ಕಾಲದ ಜವಳಿ ಕಾರ್ಮಿಕರ ಮುಷ್ಕರದ ನಂತರ ಕೇವಲ ಮುಂಬೈಯೊಂದರಲ್ಲೇ ಗಿರಣಿಗಳು ಒಂದು ಲಕ್ಷಕ್ಕೂ ಹೆಚ್ಚು ಬದಲಿ ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆದಿದೆ.

ಮೂರನೇ ಒಂದು ಭಾಗ ಗಿರಣಿಗಳನ್ನು ನಿಯಂತ್ರಿಸುತ್ತಿರುವ ಹಾಗೂ ಶೇ. 80 ರಷ್ಟು ಬಟ್ಟೆ ಉತ್ಪಾದಿಸುವ ಹಾಗೂ ಮಾರಬಲ್ಲ ಹತ್ತಿ ತಯಾರಿಸುವ ರಾಷ್ಟ್ರೀಯ ಜವಳಿ ಕಾರ್ಪೊರೇಷನ್ (ಎನ್.ಟಿ.ಸಿ.) ಸ್ವತಃ ದೊಡ್ಡ ಬಿಕ್ಕಟ್ಟಿನಲ್ಲಿ ಇದೆ. ಒಟ್ಟಾರೆ ಈವರೆಗೆ ಇದು 1331 ಕೋಟಿ ನಷ್ಟವನ್ನು ಕೂಡಿಸಿಕೊಂಡಿದ್ದು, 1987-88ನೇ ವರ್ಷದ ಸಾಲಿಗೆ ಇದರ ನಷ್ಟ 266 ಕೋಟಿ ಆಗಿದೆ. ತತ್ಫಲವಾಗಿ ಇದರ ಬಹಳಷ್ಟು ಘಟಕಗಳು ನಡೆಯಲಾರದ ಸ್ಥಿತಿಯಲ್ಲಿ ಇದ್ದು, ವಿಲೀನ, ಉದ್ಯೋಗದಲ್ಲಿ ಕಡಿತ, ಆಧುನೀಕರಣ, ಮೊದಲಾದ ಸೂಚನೆಗಳು ಹೊರಬರುತ್ತಿವೆ.

ನಮ್ಮ ರಾಜ್ಯದಲ್ಲಿ ಮೈಸೂರಿನ ಕೆ.ಆರ್. ಮಿಲ್ ಕಳೆದ 3 ವರ್ಷಗಳಿಂದ ಮುಚ್ಚಲ್ಪಟ್ಟಿದ್ದು 2,500 ಕ್ಕೂ ಹೆಚ್ಚು ಕಾರ್ಮಿಕರು ನಿರುದ್ಯೋಗಕ್ಕೆ ತಳ್ಳಲ್ಪಟ್ಟಿದ್ದಾರೆ. ಕಾರ್ಮಿಕರು ಹಲವು ಹೋರಾಟ ನಡೆಸಿದ್ದಾಗ್ಯೂ, ಕಾರ್ಮಿಕರ ಸಂಘಟನೆಗಳು ಪ್ರಯತ್ನಪಟ್ಟರೂ ಕೂಡ ಇಂದಿಗೂ ಈ ಗಿರಣಿ ಮುಚ್ಚಿಯೇ ಇದೆ. 1986 ರಲ್ಲಿ ದಾವಣಗೆರೆಯ ಶಂಕರ್ ಹತ್ತಿ ಗಿರಣಿ ಮುಚ್ಚಲ್ಪಟ್ಟಿತು. ಈ ಮುಚ್ಚುವಿಕೆಯ ವಿರುದ್ಧ ಕಾರ್ಮಿಕರು ಮೊದಲಿಗೆ ಸ್ವಲ್ಪ ಹೋರಾಟ ನಡೆಸಿದರು. ಕೊನೆಗೆ ಇವರು ಮಾಲೀಕರ ಬಲೆಗೆ ಬಿದ್ದು ಮನೆ ನಿವೇಶನಗಳನ್ನು ಅಂತಿಮ ಪರಿಹಾರವೆಂದು ಒಪ್ಪಿ ಶರಣಾಗುವಂತಾಯಿತು. ಈ ರೀತಿ ಕಾರ್ಮಿಕರು ಮೋಸಹೋದರು. ದಾವಣಗೆರೆಯ ಇತರೆ 3 ಗಿರಣಿಗಳಾದ ಗಣೇಶ, ಚಿಗಟೇರಿ ಮತ್ತು ಸಿದ್ಧೇಶ್ವರ ಮಿಲ್‌ಗಳು ಕಳೆದ ವರ್ಷ ಮುಚ್ಚಲ್ಪಟ್ಟವು. ಈ ಗಿರಣಿಗಳ ಕಾರ್ಮಿಕರು ಇದರ ವಿರುದ್ಧ ಹೋರಾಡುತ್ತಲೇ ಇದ್ದಾರೆ. ಈ ಮೂರು ಮಿಲ್ಲುಗಳು ಒಟ್ಟಾರೆ 5 ಸಾವಿರ ಕಾರ್ಮಿಕರ ಉದ್ಯೋಗವನ್ನು ಕಸಿದುಕೊಂಡಿವೆ. ಆಧುನೀಕರಣವನ್ನು ಕೂಡ ಈ ಮಿಲ್ಲುಗಳ ಮಾಲೀಕ ವರ್ಗ ಸೂಚಿಸುತ್ತಿಲ್ಲ. ಉಪವಾಸ ಮುಷ್ಕರ, ಪಿಕೆಟಿಂಗ್, ರಸ್ತೆ ತಡೆ, ಜೈಲ್ ಭರೋ ಇವೇ ಮೊದಲಾದ ಹೋರಾಟಗಳನ್ನು ಕಾರ್ಮಿಕರು ಹಾಗೂ ಸಂಘಗಳು ನಡೆಸಿದ್ದಾಗ್ಯೂ ಮಿಲ್‌ಗಳನ್ನು ಮತ್ತೆ ಆರಂಭಿಸಲು ಸಾಧ್ಯವಾಗಲಿಲ್ಲ. ರಾಜ್ಯ ಸರ್ಕಾರ ರಿಯಾಯಿತಿ ನೀಡುವ ಆರ್ಥಿಕ ಭದ್ರತೆ ನೀಡುವ ಇವೇ ಮೊದಲಾದ ಸೌಲಭ್ಯಗಳನ್ನು ನೀಡಲು ಮುಂದಾಗಿದೆ. ಹೀಗಿದ್ದಾಗ್ಯೂ ಪರಿಹಾರ ಇನ್ನೂ ಕಾಣದಾಗಿದೆ. ಕೇವಲ 1 ತಿಂಗಳ ಹಿಂದೆ ದಾವಣಗೆರೆಯ ಇನ್ನೊಂದು ಜವಳಿ ಗಿರಣಿ 'ಅಂಜನೇಯ' ಮಿಲ್ ಕಾರ್ಮಿಕರ ವಿರೋಧವಾಗಿ ಬಾಗಿಲು ಮುಚ್ಚಿದೆ.

ಮುಚ್ಚಿದ ಗಿರಣಿಗಳು	
ತಮಿಳುನಾಡು	42
ಗುಜರಾತ್	33
ಮಹಾರಾಷ್ಟ್ರ	12
ಪಶ್ಚಿಮ ಬಂಗಾಳ	10
ಕರ್ನಾಟಕ	8
ಉತ್ತರ ಪ್ರದೇಶ	7
ರಾಜಾಸ್ಥಾನ	7
ಆಂಧ್ರಪ್ರದೇಶ	4
ಮಧ್ಯಪ್ರದೇಶ	3
ಕೇರಳ	2
ಹರಿಯಾಣ	2
ಬಿಹಾರ್	1

ಬೆಂಗಳೂರಿನಲ್ಲಿ ಸೂರ್ಯೋದಯ ಮಿಲ್ ಶಾಶ್ವತವಾಗಿ ಮುಚ್ಚುವ ಅನುಮೋದನೆಗಾಗಿ ಸರ್ಕಾರಕ್ಕೆ ಬರೆಯಿತು. ರಾಜ್ಯ ಸರ್ಕಾರ ಅದನ್ನು ನಿರಾಕರಿಸಿತು. ಆದರೆ ರಾಜ್ಯದ ಉಚ್ಚ ನ್ಯಾಯಾಲಯ ರಾಜ್ಯ ಸರ್ಕಾರವು ಗಿರಣಿ ಮುಚ್ಚಲು ನಿರಾಕರಣೆ ನೀಡಿದ ಆಜ್ಞೆಗೆ ತಡೆ ನೀಡಿತು. ಮಿಲ್ ಸುಮಾರು 3 ಕೋಟಿ ರೂ. ಬೆಲೆ ಬಾಳುವ 9 ಎಕರೆ ಭೂಮಿಯನ್ನು ಹೊಂದಿದ್ದು, ಅದನ್ನು ಮಾರುವ ಉದ್ದೇಶ ಹೊಂದಿದೆ. ಅವರದ್ದೇ ಆದ ಬ್ಯಾಲೆನ್ಸ್ ಷೀಟ್ ರೀತ್ಯ ಈ ಭೂಮಿಯ ಬೆಲೆ ಕೇವಲ 26 ಸಾವಿರ ರೂಪಾಯಿ; ಬೆಂಗಳೂರಿನ ರಾಮ್‌ಕುಮಾರ್ ಮಿಲ್ ಕಳೆದ 5 ತಿಂಗಳಿಂದ ಬೀಗ ಮುದ್ರೆಯಲ್ಲಿ ಇದೆ. ಕೆಲಸಗಾರರು ಕೆಲಸ ಮಾಡಲು ಬಿಡಬೇಕಾದರೆ ಪ್ರತಿಯೊಬ್ಬರೂ ಮುಚ್ಚಳಿಕೆ ಬರೆದು ಕೊಡಬೇಕೆಂಬ ಷರತ್ತು ಒಡ್ಡಿ, ನಿಷೇಧಿಸಿದಾಗ್ಯೂ ಕಾನೂನು ಬಾಹಿರ ಬೀಗಮುದ್ರೆಯನ್ನು ಇದು ಮುಂದುವರಿಸಿದೆ.

ಬಿಜಾಪುರ ಸಹಕಾರೀ ನೇಯ್ಗೆ ಮಿಲ್ ಕಳೆದ 1 ವರ್ಷದಿಂದ ಮುಚ್ಚಲ್ಪಟ್ಟಿದೆ. ಇದೇ ರೀತಿ ಬಳ್ಳಾರಿ, ಬಾಗಲ್‌ಕೋಟೆ, ರಾಯಚೂರುಗಳ ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳು ಮುಚ್ಚಲ್ಪಟ್ಟವೆ. ಪರಿಣಾಮವಾಗಿ ಇಲ್ಲಿನ 5 ಸಾವಿರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಈ ಮಿಲ್ಲುಗಳು ಸರ್ಕಾರಿ ಅಧಿಕಾರಿಗಳ ದುರಾಡಳಿತಕ್ಕೆ ಒಳಗಾಗಿವೆ. ಆರ್ಥಿಕ ನಷ್ಟವೇ ಈ ಸಹಕಾರಿ ಮಿಲ್‌ಗಳು ಮುಚ್ಚಲು ಕಾರಣವಾಗಿದೆ.

ಬೆಂಗಳೂರು ಚಲೋ ಮೊದಲಾದ ಕಾರ್ಯಕ್ರಮಗಳನ್ನು ಮಾಡುತ್ತಾ ಸಹಕಾರಿ ವಲಯದ ಸ್ಪಿನ್ನಿಂಗ್ ಮಿಲ್ಲಿನ ಕಾರ್ಮಿಕರು ಹೋರಾಡಿದರು. ಈ ಮಿಲ್ಲುಗಳನ್ನು ಸರಿಯಾದ ಮೇಲ್ವಿಚಾರಣೆ ಮಾಡಬೇಕಾಗಿದ್ದ ರಾಜ್ಯ ಸರ್ಕಾರ ತನ್ನ ಕೆಲಸವನ್ನು ಮಾಡುವಲ್ಲಿ ವಿಫಲವಾಯಿತು. ಇದಕ್ಕಾಗಿ ರೂಪಿಸಿದ ಮಂತ್ರಿ ಮಂಡಳದ ಉಪ ಸಮಿತಿ ಯಾವುದೇ ಪರಿಹಾರ ಕ್ರಮ ಕೈಗೊಳ್ಳಲು ವಿಫಲಗೊಂಡಿತು.

ನಮ್ಮ ರಾಜ್ಯದಲ್ಲಿ 4 ಎನ್. ಟಿ. ಸಿ. ಮಿಲ್ಸ್‌ಗಳಿವೆ. ಬೆಂಗಳೂರಿನಲ್ಲಿ ಇರುವ ಮೈಸೂರು ಮಿಲ್ಸ್ ಮತ್ತು ಮಿನರ್ವ ಮಿಲ್‌ಗಳನ್ನು ವಿಲೀನಗೊಳಿಸುವ ಉದ್ದೇಶವನ್ನು ಆಡಳಿತ ವರ್ಗ ಹೊಂದಿದ್ದು ಇದು 3 ಸಾವಿರ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಲಿದೆ. ಮಿನರ್ವ ಮಿಲ್ 52 ದಿನಗಳ ಕಾಲ ಬೀಗಮುದ್ರೆ ಹಾಕಲ್ಪಟ್ಟಿತ್ತು. ಇದು ಮತ್ತೆ ತೆರೆಯಲ್ಪಟ್ಟಾಗ ಕೇವಲ ಖಾಯಂ ಆದ ಕಾರ್ಮಿಕರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ತಾತ್ಕಾಲಿಕವಾಗಿ ಆಗಾಗ್ಗೆ ಕೆಲಸ ಮಾಡುತ್ತಿದ್ದ 387 ಜನರನ್ನು ಹೊರಗಿಡಲಾಯಿತು. ಕಾರ್ಮಿಕ ಕಾಯಿದೆಯ ಎಲ್ಲಾ ನಿಯಮಗಳನ್ನು ಆಡಳಿತ ವರ್ಗ ಗಾಳಿಗೆ ತೂರಿದೆ. ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ಮತ್ತು ಉತ್ಪಾದನೆಗೆ ವೇತನವನ್ನು ಜೋಡಿಸುವ ಹೆಸರಿನಲ್ಲಿ ಏಕಪಕ್ಷೀಯವಾಗಿ ವೇತನವನ್ನು ಕಡಿತಗೊಳಿಸಿದ್ದಾರೆ. ವಾರದಲ್ಲಿ 7 ದಿನದ ಪದ್ಧತಿಗೆ ಶೇ. 4 ಹೆಚ್ಚುವರಿ ವೇತನ ಪಾವತಿ ಮಾಡುವ ಕ್ರಮವನ್ನು ಏಕಪಕ್ಷೀಯವಾಗಿ ವಾಪಸ್ಸು ತೆಗೆಯಲಾಗಿದೆ. ನ್ಯಾಯಬದ್ಧವಾದ ಮಿತಿಗಿಂತ ಮಿಗಿಲಾಗಿ ಕ್ಯಾಂಟೀನ್ ಬೆಲೆಗಳನ್ನು ಏರಿಸಲಾಗಿದೆ. ವಾರಕ್ಕೆ 6 ದಿನದ ಕ್ರಮವನ್ನು ಜಾರಿಗೊಳಿಸುವಂತೆ ಮೈಸೂರು ಮಿಲ್‌ನ ಆಡಳಿತ ವರ್ಗ ನ್ಯಾಯಾಲಯದಿಂದ ಆದೇಶ ಪಡೆದಿದೆ. 'ಲಾಭದಾಯಕವಲ್ಲದ ಡಿಪಾರ್ಟ್‌ಮೆಂಟ್ ಗಳಲ್ಲಿ ಅಕೇಷನಲ್ ಕ್ಯಾಷುಯಲ್ (ಓ.ಸಿ ಕೆಲಸಗಾರರನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಆಡಳಿತ ವರ್ಗ ಹಠ ಹಿಡಿದದ್ದರಿಂದ 224 ಕಾರ್ಮಿಕರು ನಿರುದ್ಯೋಗಿಗಳಾದರು. ಮೈಸೂರು ಮಿಲ್‌ನಲ್ಲೂ ಕೂಡ ಶೇ. 4 ವೇತನ ಕ್ರಮವನ್ನು ಹಿಂತೆಗೆದುಕೊಂಡಿದಾಗ್ಯೂ, ಕ್ಯಾಂಟೀನ್ ಧಾರಣೆಯನ್ನು ಅಸಾಧಾರಣವಾದ ಮಟ್ಟಕ್ಕೆ ಏರಿಸಲಾಗಿದೆ. ಮುಚ್ಚುವಿಕೆಯ ಬೆದರಿಕೆಯಿಂದಾಗಿ ಈ ಎರಡು ಮಿಲ್‌ಗಳ ಕಾರ್ಮಿಕರು ಮುಂದಿನ ಹೋರಾಟವನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದ 3ನೇ ಎನ್.ಟಿ.ಸಿ. ಮಿಲ್ ಆಗಿರುವ ಗುಲ್ಬರ್ಗದ ಎಂ.ಎಸ್.ಕೆ. ಮಿಲ್ ತನ್ನ ಕಾನೂನು ಬಾಹಿರ ಬೀಗಮುದ್ರೆಯನ್ನು ಕಳೆದ 2 ತಿಂಗಳಿಂದ ಮುಂದುವರಿಸಿದೆ. ಎನ್.ಟಿ.ಸಿ.ಯ 4ನೇ ಗಿರಣಿಯಾದ ದಾವಣಗೆರೆಯ ಎಲ್ಲಮ್ಮ ಹತ್ತಿ ಗಿರಣಿ ಕೆಲಸ ನಿರ್ವಹಿಸುತ್ತಿದೆ. ಆದರೆ ನಿರಂತರವಾದ ನಷ್ಟ ಮುಂದುವರಿದಿದೆ. ಅಲ್ಲಿನ ಪರಿಸ್ಥಿತಿ ಸ್ಪಷ್ಟವಾಗಿಲ್ಲ. ಜೀವನ ಸಾಗಿಸುವುದು ದುಸ್ತರವಾದ ಕಾರಣ ಮುಚ್ಚಲ್ಪಟ್ಟ ಮಿಲ್ಲಿನ ಕಾರ್ಮಿಕರು ಹಾಗೂ ಮುಚ್ಚುವಿಕೆಯಿಂದ ಬಾಧಿಸಲ್ಪಟ್ಟಿರುವ, ಕೆಲವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ.

ಈ ಪ್ರತಿಯೊಂದು ಘಟನೆಗೆ ನಾವು ಬದುಕುತ್ತಿರುವ ಅನಿಷ್ಟ ಪದ್ಧತಿಗೆ ಹಿಡಿದ ಕನ್ನಡಿಯಾಗಿದೆ. ಪ್ರಸ್ತುತದಲ್ಲಿ ದೇಶ, ಬಂಡವಾಳಶಾಹಿ ಜಗತ್ತು ಹಾಗೂ ನಿರ್ದಿಷ್ಟವಾಗಿ ಜವಳಿ ಉದ್ಯಮ ಅನುಭವಿಸುತ್ತಿರುವ ಬಿಕ್ಕಟ್ಟಿಗೂ ಪ್ರಸ್ತುತ ಆರ್ಥಿಕ ಬಿಕ್ಕಟ್ಟಿಗೂ ನೇರವಾದ ಸಂಬಂಧವಿದೆ. ಸಮಸ್ಯೆಯನ್ನು ಸರಿಯಾದ ಮಾನದಂಡದೊಂದಿಗೆ ಅರ್ಥೈಸಿಕೊಳ್ಳುವ ದೃಷ್ಟಿಯಲ್ಲಿ ಆ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸುವುದು ಅತ್ಯಗತ್ಯ.

ವಿಶ್ವ ಆರ್ಥಿಕ ವ್ಯವಸ್ಥೆಯ ಹೆಸರಿನಲ್ಲಿ ನಮ್ಮ ರಾಷ್ಟ್ರವು ಬಂಡವಾಳಶಾಹಿ ಬೆಳವಣಿಗೆಯ ಪಥವನ್ನು ಅನುಸರಿಸುತ್ತಿದೆ. ಅಂದರೆ, ಮಾಲೀಕರಿಗೆ ಲಾಭ ದೊರೆಯದಿದ್ದ ಪಕ್ಷದಲ್ಲಿ ಮಾಲೀಕರು ಉತ್ಪಾದನೆ ಮಾಡಲಾರರು. ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳು ವಸಾಹತುಗಳನ್ನು ಲೂಟಿಮಾಡಿ, ದೋಚಿ ಮೂಲದಲ್ಲಿ ಬಂಡವಾಳವನ್ನು ಶೇಖರಿಸಿದ್ದು ಈಗ ನವ ವಸಾಹತುಶಾಹಿ ನೀತಿಯ ಮೂಲಕ ಅದನ್ನು ಮುಂದುವರಿಸಿದೆ. ಆದರೆ ನಮ್ಮ ರಾಷ್ಟ್ರದ ಬಂಡವಾಳಶಾಹಿಗಳಿಗೆ ಈ ಮಾದರಿಯ ಅನುಕೂಲವಿಲ್ಲ. ಇವರಿಗೆ ನಮ್ಮದೇ ಜನವಿಭಾಗವನ್ನು ಸುಲಿಯುವ ಅವಕಾಶ ಮಾತ್ರ ಇದೆ. ಅಲ್ಲದೆ ಇವರು ಗ್ರಾಮಾಂತರದ ಶ್ರೀಮಂತರೊಂದಿಗೆ ತಮ್ಮ ಸಖ್ಯ ಮುಂದುವರೆಸಿದ್ದರಿಂದ ಒಂದು ಕಾರ್ಷಿಕ ಕ್ರಾಂತಿಯ ಮೂಲಕ ಕೃಷಿ ವಲಯವನ್ನು ಬೆಳೆಸಿ, ತನ್ಮೂಲಕ ತಮ್ಮ ಸರಕುಗಳಿಗೆ ಒಂದು ವ್ಯಾಪಕ ಮಾರುಕಟ್ಟೆ ಪಡೆಯುವುದೂ ಸಾಧ್ಯವಾಗಲಿಲ್ಲ.

> ಜವಳಿಯ ತಲಾ ಬಳಕೆ ಹೆಚ್ಚದೆ ಜವಳಿ ಉತ್ಪಾದನೆ ಹೆಚ್ಚುವುದಿಲ್ಲ. ತಲಾ ಆದಾಯ ಹೆಚ್ಚದೆ ಇದೂ ಸಾಧ್ಯವಿಲ್ಲ.

ಈ ಹಿನ್ನೆಲೆಯಲ್ಲಿ ಜವಳಿ ಉದ್ಯಮದ ಬಿಕ್ಕಟ್ಟನ್ನು ಅರ್ಥೈಸಿಕೊಳ್ಳಬೇಕಾಗಿದೆ. ಬಟ್ಟೆಯ ತಲಾ ಬಳಕೆ ಹೆಚ್ಚಾಗದೆ ಜವಳಿ ಉತ್ಪಾದನೆ ಹೆಚ್ಚುವುದಿಲ್ಲ. ಆದರೆ ಬಳಕೆ ಹೆಚ್ಚುವ ಬದಲು ಕಡಿಮೆಯಾಗಿದೆ. ತಲಾ ಬಟ್ಟೆ ಬಳಕೆಯನ್ನು ಹಿಂದಿನ ಮಟ್ಟಕ್ಕೆ ಏರಿಸಿದರೂ ಕೂಡಾ ಜವಳಿ ಉತ್ಪಾದನೆ ಶೇ. 50 ರಷ್ಟು ಹೆಚ್ಚಲು ಸಾಧ್ಯ. ಆದರೆ ತಲಾ ಆದಾಯ ಹೆಚ್ಚದೆ ಇದೂ ಸಾಧ್ಯವಿಲ್ಲ.

ಕೃಷಿ ಬೆಳವಣಿಗೆಯ ಮೂಲಭೂತ ಸಮಸ್ಯೆಗಳನ್ನು ಪರಿಹರಿಸದೆ ಕೈಗಾರಿಕಾ ಸರಕುಗಳಿಗೆ ದೊಡ್ಡ ಮಾರುಕಟ್ಟೆ ಸೃಷ್ಟಿಸಿಲ್ಲವಾದ್ದರಿಂದ ಕೈಗಾರಿಕೋದ್ಯಮಿಗಳು ತಮ್ಮ ಸರಕುಗಳನ್ನು ಮಾರಿ ಲಾಭ ಪಡೆಯಲಾಗುತ್ತಿಲ್ಲ. ಆದ್ದರಿಂದ ಅವರು ಉತ್ಪಾದನಾ ಖರ್ಚನ್ನೇ ಕಡಿತ ಮಾಡಿ ತಮ್ಮ ಲಾಭ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಮಾಲೀಕ ವರ್ಗ ಕಾರ್ಮಿಕರ ಮೇಲೆ ಕೆಲಸದ ಹೊರೆ ಹೆಚ್ಚಿಸುವ ಕೆಲಸವನ್ನಷ್ಟೇ ಮಾಡುತ್ತಿದೆ. ಅವರಿಗೆ ಮಾರುಕಟ್ಟೆ ವಿಸ್ತರಿಸುವ ಯೋಜನೆ ಇಲ್ಲ. ಉತ್ಪಾದನೆ ಹೆಚ್ಚಿಸುವ ಸಾಧ್ಯತೆಯೂ ಇಲ್ಲ. ಯಾಕೆಂದರೆ ಮಾರುಕಟ್ಟೆ ಪರಿಸ್ಥಿತಿ ಬಿಗಡಾಯಿಸಿದೆ.

ಜವಳಿ ಉತ್ಪಾದನೆಯನ್ನು ವಿಕೇಂದ್ರಿಕರಿಸುವುದು ಬಂಡವಾಳಶಾಹಿಗಳು ಅನುಸರಿಸುತ್ತಿರುವ ಇನ್ನೊಂದು ಮಾರ್ಗವಾಗಿದೆ. ಇದು ಮಿಲ್ ವಿಭಾಗಕ್ಕೆ ತಡೆಯಾಗಿ ಪವರ್‌ಲೂಂ ವಿಭಾಗದಲ್ಲಿ ಉತ್ಪಾದನೆ ಹೆಚ್ಚಾಗುವಂತೆ ಮಾಡಿದೆ. 1950–51 ರಲ್ಲಿ ಜವಳಿಯ ಶೇ. 80 ಉತ್ಪಾದನೆಯನ್ನು ಮಿಲ್ ವಿಭಾಗ ಮಾಡುತ್ತಿದ್ದರೆ ವಿಕೇಂದ್ರೀಕರಿಸಲ್ಪಟ್ಟ ವಲಯ ಶೇ. 20 ರಷ್ಟನ್ನು ಉತ್ಪಾದಿಸುತ್ತಿತ್ತು. ನಂತರದ ವರ್ಷಗಳಲ್ಲಿ ಇದು ಮಿಲ್ ವಲಯದಲ್ಲಿ 33 ಶೇ. ಹಾಗೂ ವಿಕೇಂದ್ರೀಕರಿಸಲ್ಪಟ್ಟ ವಲಯದಲ್ಲಿ (1985) ಶೇ. 67 ಉತ್ಪಾದಿಸುವ ಮಟ್ಟಕ್ಕೆ ಬಂದಿತು.

ಕಾರ್ಮಿಕರ ವೇತನ ವಿಕೇಂದ್ರಿಕರಿಸಲ್ಪಟ್ಟ ವಲಯಕ್ಕಿಂತ ಮಿಲ್ ವಲಯದಲ್ಲಿ ಉತ್ತಮವಾಗಿರುವುದರಿಂದ ಮಾಲೀಕ ವರ್ಗ ವಿಕೇಂದ್ರೀಕರಣದ ಕೆಲಸಕ್ಕೆ ತೊಡಗಿತು. ವಿಕೇಂದ್ರೀಕೃತ ವಲಯದಲ್ಲಿ ಕಾರ್ಮಿಕರನ್ನು ತೀವ್ರವಾಗಿ ಶೋಷಿಸಲು ಅವರಿಗೆ ಸಾಧ್ಯವಾಗದೆ ಮಿಲ್ ವಲಯದಲ್ಲಿ ಇರುವಂತೆ ವಿಕೇಂದ್ರೀಕರಿಸಲ್ಪಟ್ಟ ವಲಯ–ಪವರ್ ಲೂಂ ಮತ್ತು ಕೈ ಮಗ್ಗದ ವಲಯದಲ್ಲಿ ಕಾರ್ಮಿಕರು ಸಂಘಟಿತರಾಗುವ ಅನುಕೂಲತೆ ಇಲ್ಲದಿರುವುದರಿಂದಾಗಿ ಮಾಲೀಕ ವರ್ಗಕ್ಕೆ ಕಾರ್ಮಿಕರನ್ನು ವಿಭಜಿಸಿ ಈಡಲು ಹಾಗೂ ವೇತನ ಮಟ್ಟವನ್ನು ಕೆಳಗೆಳೆಯಲು ಅನುಕೂಲವಾಗಿದೆ. ಮಿಲ್‌ಗಳಲ್ಲಿ ಸಾಮಾನ್ಯ ಕೈಮಗ್ಗಗಳನ್ನು ಕಿತ್ತು ಹಾಕಿ ಆಧುನಿಕ ಕೈಮಗ್ಗಗಳನ್ನು ಭಾಗಶಃ ಅಳವಡಿಸುವ ಗುಟ್ಟು ಇಲ್ಲಿ ಅಡಗಿದೆ.

ಜವಳಿ ಉದ್ಯಮವನ್ನು ಭಾಧಿಸುವ ಇನ್ನೊಂದು ಅಂಶವೆಂದರೆ ಕೃತಕ ನೂಲಿನ (ಸಿಂಥೆಟಿಕ್ ಫೈಬರ್) ಅಭಿವೃದ್ಧಿ, 1950-51 ರಲ್ಲಿ ಕೃತಕ ನೂಲಿನ ಉತ್ಪಾದನೆ ಹತ್ತಿ ನೂಲಿನ ಉತ್ಪಾದನೆಯ ಶೇ. 4 ರಷ್ಟು ಇತ್ತು. 1970–71 ರಲ್ಲಿ ಇದು ಶೇ. 10.56 ಕ್ಕೆ ಏರಿತ್ತು.

(5ನೇ ಪುಟ ನೋಡಿ)

> ನೂತನ ಜವಳಿ ನೀತಿ ಜ್ಯಾರಿಯ ಮೂರು ವರ್ಷಗಳಲ್ಲಿ ಮಿಲ್ ವಿಭಾಗದಲ್ಲಿ ಬಟ್ಟೆಗಳ ಉತ್ಪಾದನೆ ಮತ್ತೆ ಶೇ.25 ಇಳಿದಿದೆ. ಆದರೂ ಸರ್ಕಾರ 4 ಸಾವಿರ ಕೋಟಿ ರೂ. ಗಳನ್ನು ಅವರಿಗೆ ಸುರಿದಿದೆ. ಈ ಬಾರಿಯ ಬಜೆಟ್‌ನಲ್ಲಿ 280 ಕೋಟಿ ರೂ. ರಿಯಾಯ್ತಿ ನೀಡಿದೆ.

ರಾಷ್ಟ್ರೀಕರಣ ಏಕೈಕ ಪರಿಹಾರ

(4ನೇ ಪುಟದಿಂದ)

ನೂಲಿನ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ಪ್ರಯತ್ನದ ಬೆನ್ನಲ್ಲೇ 'ಓಪನ್ ಎಂಡ್ ಸ್ಪಿನ್ನಿಂಗ್' ನಂತಹ ಆಧುನಿಕ ಕ್ರಮ ಜಾರಿಗೆ ಬಂದಿದೆ.

ಬಿಕ್ಕಟ್ಟಿನ ಒಟ್ಟು ಫಲವೇನೆಂದರೆ ಲಕ್ಷಾಂತರ ಕಾರ್ಮಿಕರು ಉದ್ಯೋಗ ಕಳೆದುಕೊಂಡಿರುವುದು. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆಯೇ 3 ಕೋಟಿ ದಾಟಿರುವ ಸಮಯದಲ್ಲೇ ಇದು ನಡೆಯುತ್ತಿದೆ.

ಈ ಬಿಕ್ಕಟ್ಟಿನ ಮಧ್ಯದಲ್ಲಿ ಭಾರತ ಸರ್ಕಾರ 1985ರಲ್ಲಿ ತನ್ನ ನೂತನ ಜವಳಿ ನೀತಿ (ಎನ್.ಟಿ.ಪಿ)ಯನ್ನು ಪ್ರಕಟಿಸಿತು. ಉತ್ಪಾದನೆ ಹೆಚ್ಚುಪಡಿಸುವ ದಿಕ್ಕಿನತ್ತ ಹಾಗೂ ಉದ್ಯೋಗಾವಕಾಶ ಹೆಚ್ಚಿಸುವ ನಿಟ್ಟಿನಲ್ಲಿ ನೂತನ ಜವಳಿ ನೀತಿಯನ್ನು ಕೊಂಡೊಯ್ಯುವ ಬದಲು, ನೂತನ ಜವಳಿ ನೀತಿ ಬಂಡವಾಳಶಾಹಿಗಳಿಗೆ ತಲೆಬಾಗಿದೆ. ಮಾತ್ರವಲ್ಲ ಏಕಸ್ವಾಮ್ಯ ಪ್ರಭುಗಳ ಲಾಭವನ್ನು ಹೆಚ್ಚಿಸುವುದಷ್ಟೇ ಇದರ ಉದ್ದೇಶ. ಸ್ಥಳೀಯವಾಗಿ ಯಂತ್ರೋಪಕರಣಗಳನ್ನು ಉತ್ಪಾದಿಸುವವರ ಹಿತವನ್ನು ರಕ್ಷಿಸುವ ಬದಲು ಹೊಸ ಜವಳಿ ನೀತಿಯು ದೊಡ್ಡ ರೀತಿಯಲ್ಲಿ ಷಟಲ್ ರಹಿತ ಮಗ್ಗಗಳು, ಓಪನ್ ಎಂಡ್ ಸ್ಪಿನ್ನಿಂಗ್ ಮುಂತಾದ ಆಧುನಿಕ ಯಂತ್ರಗಳನ್ನು ಆಮದು ಮಾಡಿಕೊಳ್ಳಲು ಉದ್ದೇಶಿಸಿದೆ. ಉದ್ಯೋಗ ಕಳೆದುಕೊಂಡಿರುವ ಕಾರ್ಮಿಕರ ಹಿತವನ್ನು ರಕ್ಷಿಸುವುದಾಗಿ ಹೊಸ ಜವಳಿ ನೀತಿ ಸಾರುತ್ತದೆ. ಆದರೆ ರಾಜ್ಯ ಸರ್ಕಾರಗಳಿಂದ ಆದೇಶ ಪಡೆದು ಮುಚ್ಚಲ್ಪಟ್ಟಿರುವ ಜವಳಿ ಕಾರ್ಖಾನೆಗಳ ಕಾರ್ಮಿಕರಿಗೆ ಮಾತ್ರ ಕೇಂದ್ರ ಸರ್ಕಾರ ರಚಿಸಿರುವ ನಿಧಿ ದೊರೆಯುತ್ತಿದೆ.

1985 ರಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಮಟ್ಟದಲ್ಲಿ ಸಮಾವೇಶವೊಂದನ್ನು ಸಂಘಟಿಸಿದ್ದವು. ಹೊಸ ಜವಳಿ ನೀತಿ ವಿರುದ್ಧ ಕೆಲವು ಕಾರ್ಯಾಚರಣೆಗಳನ್ನು ನಡೆಸಲು ಅಲ್ಲಿ ತೀರ್ಮಾನಿಸಲಾಯಿತು. ಆದರೆ ಅಪಾಯ ಮನೆ ಬಾಗಿಲಿಗೆ ಬಂದೆರಗುವವರೆಗೂ ಕಾರ್ಮಿಕ ವರ್ಗ ಅದನ್ನು ಅರಿತುಕೊಳ್ಳಲಿಲ್ಲವಾದ್ದರಿಂದ ಅಖಿಲ ಭಾರತ ಹೋರಾಟ ರೂಪುಗೊಳ್ಳಲಿಲ್ಲ.

ನೂತನ ಜವಳಿ ನೀತಿ ಜಾರಿಯಲ್ಲಿರುವ ಈ ಮೂರು ವರ್ಷಗಳ ಅನುಭವ ತೋರ್ಪಡಿಸಿರುವುದೇನೆಂದರೆ ಮಿಲ್ ವಿಭಾಗದಲ್ಲಿ ಬಟ್ಟೆಗಳ ಉತ್ಪಾದನೆ ಮತ್ತೆ ಶೇ. 25ರಷ್ಟು ಇಳಿಮುಖವಾಗಿ, ವಿಕೇಂದ್ರೀಕರಿಸಲ್ಪಟ್ಟ ವಲಯದಲ್ಲಿ ಅದರಲ್ಲೂ ವಿಶೇಷವಾಗಿ ಪವರ್ ಲೂಂ ವಲಯದಲ್ಲಿ ಉತ್ಪಾದನೆ ಗಮನಾರ್ಹವಾಗಿ ಹೆಚ್ಚಿದೆ. ಇದೇ ಸಂದರ್ಭದಲ್ಲಿ ಸರ್ಕಾರ ಇದೇ ಮಿಲ್‌ಗಳ ಮಾಲೀಕರಿಗೆ ಕಳೆದ 5 ವರ್ಷದಲ್ಲಿ 4 ಸಾವಿರ ಕೋಟಿ ಹಣವನ್ನು ಟರ್ಮ್ ಕ್ಯಾಪಿಟಲ್ (ಅವಧಿ ಬಂಡವಾಳ) ಎಂದು ಸುರಿದಿದೆ. ಹಾಗೆಯೇ 1988ರ ಕೇಂದ್ರ ಬಜೆಟ್‌ನಲ್ಲಿ ಸುಂಕ ರಿಯಾಯ್ತಿಯೆಂದು 280 ಕೋಟಿ ರೂಪಾಯಿಗಳನ್ನು ನೀಡಿದೆ. ಕೇಂದ್ರ ಸರ್ಕಾರವು ರೂಪಿಸಿರುವ 'ಆಧುನೀಕರಣದ ನಿಧಿ' ಯಿಂದ ಮಾರ್ಚ್ 88 ರವರೆಗೆ 182 ಕೋಟಿ ರೂಪಾಯಿಗಳನ್ನು 'ಆರೋಗ್ಯ ಪೂರ್ಣ ಘಟಕಗಳಿಗೆ' ನೀಡಲಾಗಿದೆ–ಎಂದು ಸ್ವತಃ ಭಾರತೀಯ ಹತ್ತಿ ಮಿಲ್‌ಗಳ ಫೆಡರೇಷನ್ ತನ್ನ ವರದಿಯಲ್ಲಿ ಒಪ್ಪಿಕೊಂಡಿದೆ. ಕೇಂದ್ರ ಸರ್ಕಾರವು ಮೂರು ವಸತಿ ನಿಧಿಯಿಂದ ಕೆಲಸದಿಂದ ಹೊರ ತಳ್ಳಲ್ಪಟ್ಟ 1.8 ಲಕ್ಷ ಕಾರ್ಮಿಕರಿಗೆ ಒಂದು ಚಿಕ್ಕಾಸು ಕೂಡ ಖರ್ಚು ಮಾಡಿಲ್ಲ. ಇನ್ನೂ 2.5 ಮಿಲಿಯನ್ ಸ್ಪಿಂಡಲ್‌ಗಳನ್ನು ಹಾಗೂ 30 ಸಾವಿರ ಲೂಂಗಳನ್ನು ಮುಚ್ಚಬೇಕೆಂದು ಭಾರತ ಹತ್ತಿ ಗಿರಣಿಗಳ ಫೆಡರೇಷನ್ ವರದಿ ಬಯಸುತ್ತದೆ. ಯಾಕೆಂದರೆ ಅದರ ಪ್ರಕಾರ ಇವಿಷ್ಟು ಅನಗತ್ಯವಾದ ಹೆಚ್ಚುವರಿ ಸಾಮರ್ಥ್ಯ.

ಅಗತ್ಯ ವಸ್ತುಗಳ ಕಾಯಿದೆ ರೀತ್ಯ 1947 ರಿಂದಲೇ ಜನತಾ ಬಟ್ಟೆಗಳನ್ನು ಉತ್ಪಾದಿಸುವ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಲ್ಲಿ ಗಿರಣಿ ಮಾಲೀಕರಿಗೆ ಯಾವ ನೀತಿಯೂ ಅಡ್ಡಿಯಾಗಿಲ್ಲ. ಮೊದಮೊದಲು ಜನತಾ ಬಟ್ಟೆಗಳನ್ನು ಉತ್ಪಾದಿಸುವ ಬದಲು ಉತ್ಪಾದಿಸಬೇಕಾದ ಬಟ್ಟೆಯ ಮೇಲೆ ಮೀಟರ್‌ಗೆ 6 ಪೈಸೆಯಂತೆ ದಂಡ ತೆರುವುದೇ ಲಾಭಕರವೆನಿಸಿತು ಅವರಿಗೆ. 1978 ರಲ್ಲಿ ಜನತಾ ಬಟ್ಟೆಗಳನ್ನು ಉತ್ಪಾದಿಸುವ ಹೊರೆಯನ್ನೇ ಎನ್.ಟಿ.ಸಿಗೆ ವರ್ಗಾಯಿಸಲಾಯಿತು. ಇದರ ಪರಿಣಾಮವಾಗಿ ಎನ್.ಟಿ.ಸಿ. ರೋಗಗ್ರಸ್ಥವಾಯಿತು. 1985 ರಲ್ಲಿ ಇದನ್ನು ಕೈಮಗ್ಗದ ವಲಯಕ್ಕೆ ವರ್ಗಾಯಿಸಲಾಯಿತು. ಬಡವನ ಬಟ್ಟೆಯನ್ನು ಬಡವನಿಂದಲೇ ಉತ್ಪಾದಿಸಲಿ, ಕೊಂಡುಕೊಳ್ಳುವ ಶಕ್ತಿಯುಳ್ಳವರಿಗಾಗಿ ಉತ್ತಮ ಮಟ್ಟದ ಬಟ್ಟೆಗಳನ್ನು ಉತ್ಪಾದಿಸುವ ಕೆಲಸಗಳನ್ನು ಮಿಲ್ ವಿಭಾಗ ಮಾಡಲಿ ಎಂಬ ಇರಾದೆ ಭಾರತ ಸರ್ಕಾರದ್ದು. ಮಾತ್ರವಲ್ಲ ಈ ವಿಭಾಗಕ್ಕೇ ಎಲ್ಲಾ ರಿಯಾಯಿತಿಗಳನ್ನು ಕೂಡ ಸರ್ಕಾರ ದಯಪಾಲಿಸಿದೆ.

ಒಂದು ಶತಮಾನದಷ್ಟು ಹಳೆಯದಾದ ಜವಳಿ ಉದ್ಯಮ ಅದರ ಆರಂಭದಿಂದ ಮೊದಲ್ಗೊಂಡು ತೀರಾ ಇತ್ತೀಚಿನವರೆಗೆ ಉತ್ತಮ ಲಾಭ ಗಳಿಸುತ್ತಿತ್ತು. ಇತರೆ ವಲಯಗಳಿಗೆ ತೊಡಗಿಸುವ ಬಂಡವಾಳದ ಮೂಲ ಇದಾಗಿತ್ತು. ಜನತೆಯನ್ನು ಸುಲಿದು ಜವಳಿ ಉದ್ಯಮಿಗಳು ಇಂತಹ ಪ್ರಧಾನ ಸ್ಥಾನಮಾನ ಪಡೆದರು. ಆದರೆ ಉದ್ಯಮ ಜನ ಸಾಮಾನ್ಯರ ಅಗತ್ಯಗಳನ್ನು ಪೂರೈಸುವ ಬದಲು ಜನತೆಯ ಒಂದು ಭಾಗವನ್ನು ತಮ್ಮದೇ ಉದ್ದಿಮೆಯ ಕಾರ್ಮಿಕರನ್ನು ಸುಲಿಯಲು ಆರಂಭಿಸಿತು. ಮಾಲೀಕರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಕಾರ್ಮಿಕರು ತಮ್ಮ ಬೆನ್ನು ಮುರಿದು ನಿರ್ವಹಿಸುವಂತೆ ಮಾಡುತ್ತಿದ್ದಾರೆ. ಇಂತಹ ಉದ್ದಿಮೆಯಲ್ಲದೆ ಬೇರೆ ಯಾವುದು ತಾನೇ ರಾಷ್ಟ್ರೀಕರಣಕ್ಕೆ ತಕ್ಕುದಾಗಲು ಸಾಧ್ಯ ?

ಇಂದಿನ ಈ ಸಮಸ್ಯೆಗಳನ್ನು ಜವಳಿ ಉದ್ದಿಮೆಯನ್ನು ರಾಷ್ಟ್ರೀಕರಿಸದೆ ಪರಿಹರಿಸಲು ಸಾಧ್ಯವಿಲ್ಲ. ಭಾಗಶಃ ರಾಷ್ಟ್ರೀಕರಣ–ರೋಗಗ್ರಸ್ತ ಮಿಲ್‌ಗಳನ್ನು ವಹಿಸಿಕೊಂಡು ಗುತ್ತೆದಾರಿಗಳಿಗೆಬೇಕಾದಂತೆ ನಡೆಸುವುದು ಅವರ ಹಿತವನ್ನಷ್ಟೇ ರಕ್ಷಿಸಬಲ್ಲದು, ಇಡಿ ಜವಳಿಉದ್ಯಮವನ್ನು ರಾಷ್ಟ್ರೀಕರಿಸುವ ಮೂಲಕ ಸಾಮಾನ್ಯ ಜನರಿಗೆ ಕಡಿಮೆ ದರದ ಬಟ್ಟೆಗಳನ್ನು ಕೊಡುವ ಯೋಜನೆ ರೂಪಿಸಲು ನಮಗೆ ಸಾಧ್ಯ. ಹಾಗೂ ಉನ್ನತ ಆದಾಯ ವರ್ಗಗಳ ಮಾರುಕಟ್ಟೆಯನ್ನೂ ಪಡೆದು ಈ ಮೂಲಕ ಉನ್ನತ ಆದಾಯ ವರ್ಗಗಳು ಸಾಮಾನ್ಯ ಜನರ ಅಗತ್ಯಗಳಿಗೆ ತೆರುವಂತೆ ಮಾಡಲು ಸಾಧ್ಯವಿದೆ.

ಎನ್.ಟಿ.ಸಿ.ಯು ಕಾರ್ಮಿಕ ವರ್ಗದ ಹಿತವನ್ನು ಗಮನದಲ್ಲಿ ಇರಿಸದೆ ಆಧುನೀಕರಣ ಕ್ರಮವನ್ನು ಕೈಗೊಂಡಿದೆ. ಮಿನರ್ವ ಮಿಲ್ ಸೋವಿಯತ್ ಒಕ್ಕೂಟದಿಂದ 75 ಷಟಲ್ ರಹಿತ ಲೂಂಗಳನ್ನು ಆಮದು ಮಾಡಿಕೊಂಡಿದೆ. ಪ್ರತಿಯೊಂದು 330 ಸೆಂಟೀ ಮೀಟರ್ ಅಥವಾ 130 ಇಂಚು ಅಗಲ ಇದೆ. ಈ ಪ್ರತಿಯೊಂದು ಲೂಂಗಳು 3 ಸ್ವಯಂ ಚಾಲಿತ ಲೂಂಗಳ ಕೆಲಸ ಮಾಡಲಿದೆ. ಎನ್.ಟಿ.ಸಿ.ಯು ತನ್ನ ಪ್ಲೈನ್ ಲೂಂಗಳನ್ನು 450 ನ್ನು ಬದಲಿಸಿದೆ. ಇದು ಈ ಹಿಂದೆ ಮಿನರ್ವ ಮಿಲ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದು ಈಗ ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್‌ಗೆ ವರ್ಗಾಯಿಸಲ್ಪಟ್ಟಿದೆ. ಲೂಂಗಳನ್ನು ಈ ರೀತಿ ಒಂದು ಮಿಲ್ಲಿನಿಂದ ಇನ್ನೊಂದು ಮಿಲ್ಲಿಗೆ ಯಾಕೆ ವರ್ಗಾಯಿಸಬೇಕೆಂದು ಅರ್ಥವಾಗುತ್ತಿಲ್ಲ. ಇದರ ಮೂಲ ಕಾರಣವೇನೆಂದರೆ ದೀರ್ಘಕಾಲ ಸೇವೆ ಸಲ್ಲಿಸಿರುವ ಕಾರ್ಮಿಕರನ್ನು ಹೊರಗೆ ಕಳುಹಿಸಿ ಹೊಸ ಕಾರ್ಮಿಕರನ್ನು ಇತರೆಡೆ ನೊಂದಾಯಿಸಿಕೊಂಡು ಅವರನ್ನು ಖಾಯಂ ಮಾಡದಿರುವ ಪಿತೂರಿಯೇ ಇರಬೇಕಷ್ಟೇ. ಹಳೆಯ ಮಿಲ್‌ಗಳಲ್ಲೂ ಬಹಳಷ್ಟು ಆಧುನೀಕರಣದ ಮಾರ್ಗದಲ್ಲಿ ಇಲ್ಲ. ಕಾರ್ಮಿಕರ ಉದ್ಯೋಗಾವಕಾಶ ರಕ್ಷಿಸುವುದಾದರೆ ಆಧುನೀಕರಣಕ್ಕೇ ನಮ್ಮ ವಿರೋಧವೇನೂ ಇಲ್ಲ.

ಯಾವುದೇ ಸಂದರ್ಭದಲ್ಲಿ ಆಧುನೀಕರಣ ಮಾಡುವಾಗ ಈಗಿರುವ ಎಲ್ಲಾ ಕಾರ್ಮಿಕರ ಕೆಲಸ ರಕ್ಷಿಸುವ ಭರವಸೆ ಅತ್ಯಗತ್ಯವಾಗಿದೆ. ವಾಸ್ತವವಾಗಿ ಈಗಿನ ಒಪ್ಪಂದಗಳಲ್ಲಿ ಈ ಅಂಶ ಅಳವಡಿಸಲ್ಪಟ್ಟಿದೆ. ಆದರೆ ಎನ್.ಟಿ.ಸಿ. ಆಡಳಿತ ವರ್ಗ ಈ ಎಲ್ಲಾ ಒಪ್ಪಂದಗಳನ್ನು ಹಾಗೂ ಕಾರ್ಮಿಕ ಕಾಯಿದೆಗಳನ್ನು ನಿರ್ಭಯವಾಗಿ ಮುರಿಯುತ್ತಲೇ ಇದೆ.

ಇದೇ ರೀತಿ ಖಾಸಗೀ ಮಿಲ್ ಆದ ಬಿನ್ನಿ ಮಿಲ್‌ನಲ್ಲೂ ಸಹ ಆಧುನೀಕರಣ ಮಾಡುವ ಪ್ರಯತ್ನದಿಂದ ಸೋವಿಯೆತ್ ಲೂಂಗಳನ್ನು ತರಿಸಿಕೊಳ್ಳಲು ಆರ್ಡರ್ ಕೊಟ್ಟಿರುತ್ತಾರೆ. ಅದು ಮಾತ್ರವಲ್ಲದೆ ಎನ್.ಟಿ.ಸಿ.ಯಲ್ಲಿ ನಡೆಯುವ ಎಲ್ಲಾ ಥಾಳಿಗಳು ಕೂಡಾ ಬಿನ್ನಿ ಮಿಲ್‌ನಲ್ಲಿ ಪ್ರಾರಂಭವಾಗಿದೆ. ಇತ್ತೀಚೆಗೆ ಕ್ಯಾಂಟೀನ್‌ನಲ್ಲಿ ಸಿಗುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ಕಡಿತ ಮಾಡಿ ಕಾರ್ಮಿಕರ ಹೊಟ್ಟೆ ಮೇಲೆ ಹೊಡೆಯುತ್ತಿದ್ದಾರೆ.

ಆಡಳಿತ ವರ್ಗವು ವೇತನವನ್ನು ಉತ್ಪಾದನೆಗೆ ಕೊಂಡಿ ಹಾಕುವ ಘೋಷಣೆಯನ್ನು ಮುಂದಿಡುತ್ತಿದೆ. ಉದ್ಯಮದಲ್ಲಿ ಉತ್ಪಾದನೆಯ ಹೆಚ್ಚಳಕ್ಕೆ ಅಡ್ಡಿಯುಂಟು ಮಾಡುವ ಅಂಶಗಳು ಕಾರ್ಮಿಕರ ಕೈಯಲ್ಲಿ ಇಲ್ಲದಿರುವಾಗ ಕಾರ್ಮಿಕರ ವೇತನವನ್ನು ಉತ್ಪಾದನೆಗೆ ಕೊಂಡಿಗೊಳಿಸುವ ಮಾಲೀಕ ವರ್ಗದ ಯೋಜನೆಯು ಅವರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ತಂತ್ರವಾಗಿದೆ. ಅಂತೆಯೇ ಇದು ಕಾರ್ಮಿಕರಿಗೆ ಕೆಲಸ ಖಾತರಿಪಡಿಸಿ ಸಂಬಳ ಕೊಡುವ, ಇಲ್ಲವೇ ಲೇ ಆಫ್ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ನೆಪವಾಗಿದೆ.

ಬದಲೀ ಕಾರ್ಮಿಕರ ವ್ಯವಸ್ಥೆ ತಂದಿರುವುದು ಮತ್ತಷ್ಟು ಕಾರ್ಮಿಕರನ್ನು ಶೋಷಿಸುವ ಮಾಲೀಕರ ಉಪಾಯವಷ್ಟೆ. ಗೈರುಹಾಜರಾತಿಯ ಬಗ್ಗೆ ಮಾಲೀಕರು ಮಾಡುವ ವಾದದಲ್ಲಿ ಯಾವುದೇ ವಿವಾದವಿದ್ದಲ್ಲಿ ಈ ಬದಲಿ ಕೆಲಸಗಾರರು ನಿರಂತರವಾಗಿ ಕೆಲಸ ಮಾಡುತ್ತಿದ್ದು ಇವರ ಹೆಸರು ಖಂಡಿತವಾಗಿಯೂ ಮಸ್ಟರ್ ರೋಲ್‌ನಲ್ಲಿ ಇರಬೇಕಾಗುತ್ತದೆ. ಮಾಲೀಕ ವರ್ಗವು ಸುಪ್ರೀಂ ಕೋರ್ಟಿನ ಇತ್ತೀಚೆಗೆ ಪ್ರಕಾಶ್ ಕಾಟನ್ ಮಿಲ್ ಕೇಸಿನಲ್ಲಿ ನೀಡಿದ ತೀರ್ಪನ್ನು ಉಪಯೋಗಿಸಿಕೊಂಡು ಬದಲಿ ತಾತ್ಕಾಲಿಕ ಕಾರ್ಮಿಕರಿಗೆ ಕೆಲಸವನ್ನು ನಿರಾಕರಿಸುತ್ತಿದೆ.

ಸದ್ಯದ ಕಾರ್ಮಿಕ ಕಾನೂನುಗಳನ್ನು ಮುರಿದು ಈ ಅನ್ಯಾಯಕಾರಿ ಆಚರಣೆಗಳನ್ನು ನಡೆಸುವುದು ಗಿರಣಿ ಮಾಲೀಕರಿಗೆ ಸಾಧ್ಯವಾಗಿದೆ. ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕಾದ ಭಾರತ ಸರ್ಕಾರವೇ ಅವನ್ನು ಮುರಿಯುತ್ತಿದೆ. ಭಾರತ ಸರ್ಕಾರದ ಒಡೆತನದ ಎನ್.ಟಿ.ಸಿ. ಅತ್ಯಂತ ದೊಡ್ಡ ಕಾನೂನು ಮುರುಕನಾಗಿದೆ. ಮಿನರ್ವ ಮಿಲ್‌ನ ಲಾಕೌಟ್ ನೋಡಿದ ಮೇಲೆ ಈ ಬಗ್ಗೆ ಯಾರಿಗೂ ಸಂಶಯ ಉಳಿದಿಲ್ಲ. ಬೀಗಮುದ್ರೆಗೆ ಕಾರಣವಾದದ್ದು ಎನ್.ಟಿ.ಸಿ. ಆಡಳಿತ ಮಂಡಳಿ ಒಂದರ ಮೇಲೊಂದಾಗಿ ಕೈಗೊಂಡ ಕಾನೂನು ಬಾಹಿರ ಕ್ರಮಗಳೇ. ಲಾಕೌಟನ್ನು ನಿಷೇಧಿಸಿದ ಮೇಲೂ ಅವರು 53 ದಿನಗಳವರೆಗೆ ಅದನ್ನು ಕಾನೂನು ಬಾಹಿರವಾಗಿ ಮುಂದುವರೆಸಿದರು. ಕೈಗಾರಿಕಾ ವಿವಾದ ಕಾನೂನಿನ ಸೆಕ್ಷನ್ 9ಎ ಮತ್ತು 33ರ ವಿರುದ್ಧವಾಗಿ ಸಾಂಧರ್ಭಿಕ (ಅಕೇಶನಲ್) ಎಂದು ಈ ಹೆಸರಿಸಲ್ಪಟ್ಟ ಕಾರ್ಮಿಕರನ್ನು ಕೆಲಸಕ್ಕೆ ತಗೊಳ್ಳಲು ನಿರಾಕರಿಸುವುದು, ಸಂಬಳವನ್ನು ಉತ್ಪಾದನೆಗೆ ಕೊಂಡಿ ಹಾಕುವುದು ಮತ್ತು ಕೆಲಸದ ಹೊರೆಯ ಹೆಚ್ಚಳ ಪಡೆಯುವುದು ಅವರಿಗೆ ಸಾಧ್ಯವಾಯಿತು. ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದು ಕರ್ನಾಟಕ ಹೈಕೋರ್ಟನ್ನು ಅವರು ಕೇಳಿದರು. ಹೈಕೋರ್ಟು ಕಾರ್ಮಿಕರ ನೆರವಿಗೆ ಬರಲು ಸಾಧ್ಯವಾಗಲಿಲ್ಲ. ಲಾಕೌಟ್ ತೆರವು ಮಾಡಿದರೂ 387 ಕಾರ್ಮಿಕರನ್ನು ಹೊರಗಿಡಿಸಲು, ಹೆಚ್ಚಿನ ಕೆಲಸದ ಹೊರೆ ಹೇರಲು ಅವರಿಗೆ ಸಾಧ್ಯವಾಯಿತು. ಕಾರ್ಮಿಕರ ಕೆಲಸದ ಶರತ್ತುಗಳನ್ನು ತನ್ನ ಮನ ಬಂದಂತೆ ಬದಲಿಸಲು ಹೈಕೋರ್ಟು ತಮಗೆ ಮುಕ್ತ ಅವಕಾಶ ನೀಡಿದೆ ಎಂದು ಮಾಲೀಕರು ಯೋಚಿಸುವಂತಿದೆ. ಇದನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾಗಿದೆ. ಕಾರ್ಮಿಕರು ದೀರ್ಘ ಹೋರಾಟದಿಂದ ಪಡೆದ ಹಕ್ಕುಗಳನ್ನು, ಸೌಲಭ್ಯಗಳನ್ನು ರಕ್ಷಿಸಿಕೊಳ್ಳಬೇಕಾಗಿದೆ. ○

ಬಾಗೇಪಲ್ಲಿ ತಾ. DYFI ಪ್ರಥಮ ಸಮ್ಮೇಳನ

9-8-88 ರಂದು ಬಾಗೇಪಲ್ಲಿ ಪುರಭವನದಲ್ಲಿ ಪ್ರಥಮ ಸಮ್ಮೇಳನ ನಡೆಯಿತು. ಕೃಷಿ–ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕಾ|| ಜಿ.ವಿ. ಶ್ರೀರಾಮರೆಡ್ಡಿ ಅವರು ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಕಾ|| ಎಸ್ ಶಿವರಾಂ, ಕೋಲಾರ ಜಿಲ್ಲಾ ಕಾರ್ಯದರ್ಶಿ ಕಾ|| ಎಂ.ಎಸ್. ಆನಂದರವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸುಮಾರು 100 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ತಾಲ್ಲೂಕ್ ಸಂಚಾಲಕ ಮಂಜೂರ್ ಅಹಮದ್‌ರವರು ವರದಿ ಮಂಡಿಸಿದರು. ಕೊನೆಯಲ್ಲಿ 15 ಜನರ ತಾಲ್ಲೂಕ್ ಸಮಿತಿಯನ್ನು ರಚಿಸಲಾಯಿತು. ಐದು ಜನ ಪದಾಧಿಕಾರಿಗಳಲ್ಲಿ ಕಾ|| ಮಂಜೂರ್ ಅಹಮದ್ ಅಧ್ಯಕ್ಷರಾಗಿಯೂ ಕೃಷ್ಣಾರೆಡ್ಡಿ ಕಾರ್ಯದರ್ಶಿಯಾಗಿ ಆರಿಸಲಾಯಿತು.

ನಂತರ ಮೆರವಣಿಗೆ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಕಾ|| ಎಸ್. ಶಿವರಾಂ, ಎಂ.ಎಸ್. ಆನಂದ, ಮಂಜೂರ್ ಆಹಮದ್ ಮತ್ತು ಕೃಷ್ಣಾರೆಡ್ಡಿ ಇವರುಗಳು ಮಾತನಾಡಿದರು.

ಯುವ ಜನತೆಯ ಹಿತಾಸಕ್ತಿಗಾಗಿ ಹೋರಾಡಲು ಕರೆ

ದೇಶದ ಆಳುವ ವರ್ಗ ತಮ್ಮ ರಾಜಕೀಯ ಲಾಭಗಳಿಗಾಗಿ ಯುವಜನತೆಯನ್ನು ಉಪಯೋಗಿಸಿಕೊಳ್ಳುತ್ತಿದೆ. ಕಿತ್ತು ತಿನ್ನುದ ನಿರುದ್ಯೋಗವನ್ನು ಬಗೆಹರಿಸುವ ಕುರಿತು ಯಾವ ಗಮನವನ್ನೇ ಹರಿಸುತ್ತಿಲ್ಲವೆಂದು ಉಡ.ಪಿಯ ವಿಮಾ ನೌಕರರ ಸಂಘದ ತ್ರೀಪತಿ ಆಚಾರ್ಯರವರು ಆರೋಪಿಸಿದರು. ಅವರು ಉಡುಪಿಯ ಕಡಿಯಾಳಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡುತ್ತಿದ್ದರು. ಹರಿಜನಗಿಗೆ ದೇವಾಲಯ ಪ್ರವೇಶ ನಿಷೇಧಿಸಬೇಕೆಂದು ಹೇಳಿದ ಪುರಿಸ್ವಾಮಿಯ ಹೇಳಿಕೆಯನ್ನು ಖಂಡಿಸುವ ಹಾಗೂ ರೇಷನ್ ಕಡಿತ ಹಾಗೂ ಬೆಲೆ ಏರಿಕೆಯನ್ನು ಖಂಡಿಸುವ ನಿರ್ಣಯಗಳನ್ನು ಸ್ವೀಕರಿಸಲಾಯಿತು. ನೂತನವಾಗಿ ರಚಿತಲಾದ ಕುಂಜಿಬೆಟ್ಟು ಘಟಕಕ್ಕೆ ಕಾ|| ಕೆ. ಭಾಸ್ಕರ (ಅಧ್ಯಕ್ಷ) ಕೆ. ನಾರಾಯಣ ಪೂಜಾರಿ (ಉಪಾಧ್ಯಕ್ಷ) ಕೆ.ಯಾಕೂಬ್ (ಕಾರ್ಯದರ್ಶಿ) ಕೆ. ಸುಂದರ (ಜತೆ ಕಾರ್ಯದರ್ಶಿ) ರವರನ್ನು ಆಯ್ಕೆ ಮಾಡಲಾಗಿದೆ. ಉಡುಪಿ ತಾಲೋಕು ಕಾರ್ಯದರ್ಶಿ ಕಾ|| ರಮೇಶ್‌ಮೇಡನ್ ಸಭೆಯಲ್ಲಿ ಮಾತನಾಡಿದರು.

ಯಶಸ್ವಿಗೊಂಡ ಡಿ.ವೈ.ಎಫ್.ಐ. ರಾಜ್ಯ ಶಿಬಿರ

1988 ಆಗಸ್ಟ್ 12 ರಿಂದ 15 ರವರೆಗೆ ಚಿಂತಾಮಣಿ ತಾಲ್ಲೂಕಿನ ಕೋನಕುಂಟ್ಲುವಿನಲ್ಲಿ ಡಿ.ವೈ.ಎಫ್.ಐ. ರಾಜ್ಯ ಮಟ್ಟದ ಶಿಬಿರ ನಡೆಯಿತು. ಹದಿನಾರು ಜಿಲ್ಲೆಗಳಿಂದ ಆಯ್ಕೆ ಮಾಡಿದ್ದ ಜಿಲ್ಲಾ ಸಮಿತಿಗಳ ಎಂಬತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ|| ಸಿ. ನಂಜುಂಡಪ್ಪ, ಕೃಷಿ ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕಾ|| ಶ್ರೀರಾಮರೆಡ್ಡಿ, ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಸಂಸತ್ ಸದಸ್ಯ ಕಾ|| ಹನನ್ ಮುಲ್ಲಾ ಇವರುಗಳು, ರಾಷ್ಟ್ರೀಯ ಸಮಗ್ರತೆ, ಐಕ್ಯತೆ, ದ್ವಂದ್ವಮಾನ ಮತ್ತು ಭೌತಿಕವಾದ, ಡಿ.ವೈ.ಎಫ್.ಐ. ಕಾರ್ಯಕ್ರಮ ಸಂವಿಧಾನ, ಮತ್ತು ಭಾರತೀಯ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಯುವ ಜನರ ಪಾತ್ರ ಈ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಕಾ|| ನಾಗೇಶ್‌ಕುಮಾರ್, ಸಹ ಕಾರ್ಯದರ್ಶಿ ಕಾ|| ಸ್ವಾಮಿನಿವಾಸ, ಖಜಾಂಚಿ ಕಾ|| ಶಿವಶಂಕರ್ ಇವರುಗಳು ಕ್ರಮವಾಗಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಕಾರ್ಯದರ್ಶಿ ಕಾ|| ಜಿ.ವಿ. ಅಶ್ವತ್ ನಾರಾಯಣ ರೆಡ್ಡಿ, ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಕಾ|| ಗುರುಕಾಂತ್ ಶುಭ ಕೋರಿದರು.

ಇರಾನಿನ ಕಮ್ಯುನಿಸ್ಟರು ಗಲ್ಲಿಗೆ

ಇರಾನಿನ ಪ್ರತಿಗಾಮಿ ಇಸ್ಲಾಮಿಕ್ ಪ್ರಭುತ್ವವು ಇರಾನಿ ಜನತೆಯ ಫೆದಾಯಿನ್ (ಮೆಜಾರಿಟಿ) ಮತ್ತು ಇರಾನಿನ ಟುಡೆ ಪಕ್ಷದ ಐವರು ಮುಖಂಡರುಗಳನ್ನು ಇತ್ತೀಚೆಗೆ ಗಲ್ಲಿಗೇರಿಸಿತು. ಇನ್ನೂ 55 ರಾಜಕೀಯ ಕೈದಿಗಳನ್ನು 'ಸಾವಿನ ಕೋಣೆ'ಗೆ ವರ್ಗಾಯಿಸಿದ್ದು ಇವರೆಲ್ಲರೂ ಸಾವಿನ ದಿನಗಳನ್ನು ಕಾಯುವಂತಾಗಿದೆ.

ಇತ್ತೀಚೆಗೆ ವಧಿಸಲ್ಪಟ್ಟ ಟುಡೆ ಪಕ್ಷದ ನಾಲ್ವರು ಮುಖಂಡರುಗಳೆಂದರೆ ಆ ಪಕ್ಷದ ಕಾರ್ಯದರ್ಶಿ ಕಿಯೋಮರಸ್ ಜಾನ್‌ಸೇನಸ್, ಕೇಂದ್ರ ಸಮಿತಿ ಸದಸ್ಯ ಹಾಗೂ ಅವರ ಯುವ ವಿಭಾಗದ ಕಾರ್ಯದರ್ಶಿ ಸೈಯದ್ ಅಝುರಂಗ್ ಮತ್ತು ಸಿಮಿನ್ ಫರ್‌ದಿನ್. ಫೆದಾಯಿನ್ (ಮೆಜಾರಿಟಿ) ಮುಖಂಡ ಫರಮಾರ್ಜ್ ಸೌಫಿರವರನ್ನೂ ವಧಿಸಲಾಗಿದೆ.

ವಧಿಸಲ್ಪಟ್ಟ ಟುಡೆ ಪಕ್ಷದ ನಾಲ್ವರು ಮುಖಂಡರುಗಳಲ್ಲಿ ಇಬ್ರಾಹಿಮಿರವರನ್ನು 1982 ರಷ್ಟು ಹಿಂದೆಯೇ ಬಂಧಿಸಲಾಗಿತ್ತು. ಮಾತ್ರವಲ್ಲ ಅಂದಿನಿಂದಲೇ ಚಿತ್ರಹಿಂಸೆಗೆ ಒಳಪಡಿಸಲಾಗಿತ್ತು. 1983 ರಲ್ಲಿ ಟುಡೆ ಪಕ್ಷದ 10 ಸಾವಿರ ಸದಸ್ಯರನ್ನು ಬಂಧಿಸಿದಾಗಲೇ ಬಂಧನಕ್ಕೆ ಒಳಗಾಗಿದ್ದ ಜರ್‌ಸೇನಸ್‌ರವರನ್ನು ಕ್ರೂರ ಹಿಂಸೆ ಹಾಗು ಮಾನಸಿಕ ದೌರ್ಜನ್ಯಕ್ಕೆ ಒಳಪಡಿಸಲಾಗಿತ್ತು.

ಇರಾನಿನ ರಾಷ್ಟ್ರಪ್ರೇಮಿಗಳ ವಿರುದ್ಧ ಇಸ್ಲಾಮಿಕ್ ಪ್ರಭುತ್ವ ತೀವ್ರ ದಾಳಿಯನ್ನು ಹರಿಯಬಿಟ್ಟಿದೆ. 'ಇಸ್ಲಾಮಿಕ್ ನ್ಯಾಯಾಲಯ' ವೆಂದು ಕರೆಸಲ್ಪಡುವ ಸಂಸ್ಥೆ ಈಗಾಗಲೇ 70 ರಾಜಕೀಯ ಕೈದಿಗಳಿಗೆ ಮರಣ ದಂಡನೆಗೆ ಆಜ್ಞೆ ಮಾಡಿದೆ. ಇನ್ನೂ 55 ರಾಜಕೀಯ ಕೈದಿಗಳನ್ನು 'ಸಾವಿನ ಕೋಣೆ'ಗೆ ತಳ್ಳಲಾಗಿದೆ.

ಯುದ್ಧರಂಗದಲ್ಲಿ ಹೀನಾಯ ಸೋಲುಂಡ ಇರಾನಿನ ಪ್ರಭುತ್ವ ಜನರ ಗಮನವನ್ನು ಬೇರೆಡೆ ಸೆಳೆಯಲಿಕ್ಕಾಗಿ ಈಗ ಕಮ್ಯುನಿಸ್ಟರನ್ನು ಸಾಮೂಹಿಕವಾಗಿ ವಧಿಸುವ ಕೆಲಸ ಮತ್ತೆ ಆರಂಭಿಸಿದೆ. ಇದು ತೀರಾ ಖಂಡನಾರ್ಹ.

ಅಮೇರಿಕಾ : ಜಗತ್ತಿನ ದೊಡ್ಡ ಸಾಲಗಾರ !

ಈ ವರ್ಷದ ಕೊನೆಯ ವೇಳೆಗೆ ಅಮೇರಿಕ ಸಂಯುಕ್ತ ಸಂಸ್ಥಾನದ ಸಾಲದ ಹೊರೆ 576 ಬಿಲಿಯನ್ ಡಾಲರಿಗೆ ಮುಟ್ಟಲಿದೆ. 1986ರಲ್ಲಿ ಇದು 368. 2 ಬಿಲಿಯನ್ ಡಾಲರ್ ಮೊತ್ತದ್ದಾಗಿದ್ದು ಜಗತ್ತಿನ ಅತ್ಯಂತ ದೊಡ್ಡ ಎರಡನೇ ಸಾಲಗಾರ ದೇಶವಾದ ಬ್ರೆಜಿಲ್‌ನ ಸಾಲಕ್ಕಿಂತ ಮೂರರಷ್ಟು ಹೆಚ್ಚಿನದ್ದಾಗಿತ್ತು.

ಅಧ್ಯಯನದ ರೀತ್ಯ 1991 ರ ವೇಳೆಗೆ ಅಮೇರಿಕದ ವಿದೇಶಿ ಸಾಲ ಒಂದು ಟ್ರಿಲಿಯನ್ ಡಾಲರ್‌ಗೆ ತಲುಪಲಿದ್ದು 1995ರ ವೇಳೆಗೆ ಇದು 2.06 ಟ್ರಿಲಿಯನ್ ಡಾಲರ್ ಮೊತ್ತಕ್ಕೆ ಏರಲಿದೆ ! ಪರಿಣಾಮವಾಗಿ ಅಮೇರಿಕಾದ ರಾಷ್ಟ್ರೀಯ ಉತ್ಪಾದನೆಯ ಏರಿಗುತಾಯ ಭಾಗದ ಬಹುಪಾಲು ಸಾಲ ಪೂರೈಕೆಗಾಗಿ ವ್ಯಯವಾಗಲಿದ್ದು ಮುಂದಿನ ದಶಕಗಳಲ್ಲಿ ಅಮೇರಿಕಾದ ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಲಿದೆ. ಅಮೇರಿಕಾದ ಪ್ರಸ್ತುತ ಕೊರತೆ ಹಣಕಾಸು ಕಳೆದ ವರ್ಷ 154 ಬಿಲಿಯನ್ ಡಾಲರ್ ಇದ್ದು ಇದು ಈ ವರ್ಷ 151 ಬಿಲಿಯನ್ ಡಾಲರಿಗೆ ಇಳಿಯುವ ನಿರೀಕ್ಷೆ ಇದ್ದು 1995ಕ್ಕೆ ಇದು 326 ಬಿಲಿಯನ್ ಡಾಲರಿಗೆ ತಲುಪಲಿದೆ.

1983 ರವರೆಗೂ ಜಗತ್ತಿನ ಅತೀ ದೊಡ್ಡ ಸಾಲ ಕೊಡುವ ದೇಶವಾಗಿತ್ತು ಅಮೇರಿಕ. ಆದರೆ ಇಂದು ಈ ಸ್ಥಾನವನ್ನು ಜಪಾನ್ ವಶಪಡಿಸಿಕೊಂಡಿದೆ.

ಕಾಂಗ್ರೆಯೇತರ ಕಾರ್ಮಿಕ ಸಚಿವರುಗಳ ಸಭೆ

ಕಾರ್ಮಿಕ ವಿರೋಧಿ ವಿಧೇಯಕಕ್ಕೆ ತೀವ್ರ ವಿರೋಧ

ಕಾಂಗ್ರೆ ಏತರ ಐದು ರಾಜ್ಯ ಸರಕಾರಗಳ ಕಾರ್ಮಿಕ ಮಂತ್ರಿಗಳು ಕಲ್ಕತ್ತಾದಲ್ಲಿ ಜುಲೈ 30 ರಂದು ಸಮ್ಮೇಳನ ನಡೆಸಿ ಐಕ್ಯತೆಯಿಂದ 1988ರ ಕಾರ್ಮಿಕ ಸಂಘಗಳ ಮತ್ತು ಕೈಗಾರಿಕೆ ವ್ಯಾಜ್ಯಗಳ ಕಾಯಿದೆ (ತಿದ್ದುಪಡಿ) ವಿಧೇಯಕಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಸಮ್ಮೇಳನವನ್ನುದ್ದೇಶಿಸಿ ಪಶ್ಚಿಮ ಬಂಗಾಳದ ಕಾರ್ಮಿಕ ಸಚಿವ ಶಾಂತಿಘಟಕ್, ಕೇರಳದ ಪಂಕರಾಜನ್, ಅಸ್ಸಾಮಿನ ಬರೈ ಪ್ರಸಾದ್ ಟಲೆಂಗ್, ಆಂಧ್ರಪ್ರದೇಶದ ಬಿ. ಎಸ್. ರೆಡ್ಡಿ ಮತ್ತು ಕರ್ನಾಟಕ ರಾಜ್ಯದ ಎಸ್.ಕೆ. ಕಾಂತ ಮಾತನಾಡಿದರು. ಹರಿಯಾಣ ಮತ್ತು ಸಿಕ್ಕಿಂನ ಕಾರ್ಮಿಕ ಸಚಿವರುಗಳು ಬಂದಿರಲಿಲ್ಲ.

ರಾಷ್ಟ್ರದ ಕಾರ್ಮಿಕ ಕಾಯಿದೆಗಳನ್ನು ಪೂರ್ಣ ತಿದ್ದುಪಡಿ ಮಾಡಬೇಕೆಂಬ ಏಕ ಅಭಿಪ್ರಾಯವನ್ನು ಮಂತ್ರಿಗಳು ವ್ಯಕ್ತಪಡಿಸಿದರು. ಪ್ರಸ್ತುತ ಕಾಯಿದೆ ಪ್ರಾವಿ-ಡಂಟ್ ಫಂಡ್ ಕಾನೂನು, ಬಾಲ ಕಾರ್ಮಿಕ ಕಾನೂನು ಮೊದಲಾದವುಗಳನ್ನು ಒಳಗೊಂಡಿರುವುದಿಲ್ಲ. ಕೈಗಾರಿಕಾ ವ್ಯಾಜ್ಯಗಳು ಮಾತ್ರ ಸರಕಾರದ ಇರಾದೆಯಾಗಿದ್ದು ಕಾರ್ಮಿಕರ ಪ್ರಜಾಸತ್ತಾತ್ಮಕವಾದ ಎಲ್ಲಾ ಹಕ್ಕುಗಳನ್ನು ಬಗ್ಗುಬಡಿಯುವುದೇ ತಿದ್ದುಪಡಿ ವಿಧೇಯಕದ ಉದ್ದೇಶವಾಗಿದೆ. ಇದು ಇಡೀ ಕೈಗಾರಿಕಾ ಕ್ಷೇತ್ರದಲ್ಲೆ ದೊಡ್ಡ ಬಿರುಗಾಳಿ ಎಬ್ಬಿಸಲಿದೆ.

ಕಾಂಗ್ರೆ ಸರ್ಕಾರದ ದುರುದ್ದೇಶ ಅದು ತಂದಿರುವ 'ಆಸ್ಪತ್ರೆ ಮತ್ತು ಇತರೆ ಸಂಸ್ಥೆಗಳ ವಿದೇಯಕ' ವನ್ನು ಗಮನಿಸಿದಾಗ ಅರಿವಾಗುತ್ತದೆ. ಕಾರ್ಮಿಕರ ದೀರ್ಘವಾದ ಕಷ್ಟಕರವಾದ ಹೋರಾಟದ ನಂತರ ಪಡೆದ ಹಕ್ಕುಗಳನ್ನು ಕಸಿದುಕೊಳ್ಳುವ ಉದ್ದೇಶವೇ ಇದಾಗಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳಾಗಲಿ ಇಲ್ಲವೇ ರಾಜ್ಯ ಸರಕಾರಗಳೊಂದಿಗೆ ಪೂರ್ವಭಾವಿಯಾಗಿ ಚರ್ಚಿಸದೆ. ಕಾಂಗ್ರೆಗಿರುವ ಕ್ರೂರ ಬಹುಮತದ ಬೆಂಬಲ ಪಡೆದು ವಿಧೇಯಕಗಳಿಗೆ ಅನುಮೋದನೆ ಪಡೆಯುವುದು ಖಂಡಿತಾ ಅಪರಾಧಿ ಕೃತ್ಯವಾಗಿದೆ.

ಕಾರ್ಮಿಕ ಕಾಯಿದೆಗೆ ತಿದ್ದುಪಡಿ ಅಗತ್ಯವಾಗಿದ್ದರೂ, ಈಗ ತರಲಾಗುತ್ತಿರುವ ತಿದ್ದುಪಡಿಗಳು ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕ ವರ್ಗ ಒತ್ತಾಯಿಸುತ್ತಿರುವ ಆಶಯಗಳಿಗೆ ತೀರಾ ತದ್ವಿರುದ್ಧವಾದದ್ದಾಗಿದೆ. ಈ ಹಿಂದೆ ತ್ರಿಪಕ್ಷೀಯ ಸಭೆಗಳನ್ನು ನಡೆಸಿ ಪ್ರತ್ಯೆಗಳನ್ನು ಇತ್ಯರ್ಥ ಪಡಿಸಲಾಗುತ್ತಿದ್ದು ಈಗ ಆ ಸ್ಥಳವನ್ನು ಕಾರ್ಮಿಕ ನ್ಯಾಯಾಲಯಗಳು ಒಳಪಡಿಸಿಕೊಂಡಿದೆ. ತಿದ್ದುಪಡಿ ಕಾನೂನುಗಳ ರೀತ್ಯ ಕಾರ್ಮಿಕ ಸಂಘಗಳ ನೊಂದಣಿ ಕೂಡ ಕಷ್ಟಕರ ಕೆಲಸವಾಗಲಿದೆ. ಆದ್ದರಿಂದ ತಿದ್ದುಪಡಿ ತರುವಲ್ಲಿ ಸರ್ಕಾರಕ್ಕಿರುವ ಮೂಲ ಉದ್ದೇಶ ಈಗ ಸ್ಪಷ್ಟವಾಗುತ್ತಿದೆ. ಕಾರ್ಮಿಕರ ಹೋರಾಟವನ್ನು ಮಟ್ಟಹಾಕುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರ ಈಗ ಮಾಲೀಕರೊಂದಿಗೆ ಬಹಿ-ರಂಗವಾಗಿಯೇ ಶಾಮೀಲಾಗಿದೆ.

ಕಾರ್ಮಿಕ ಸಂಘಟನೆಗಳ ಸಂಯೋಜನೆ ಬಗ್ಗೆ ಮೊದಲೇ ಮಾಲೀಕರಿಗೆ ತಿಳಿಸಬೇಕೆನ್ನುವುದು ಹೊಸ ಕಾನೂನಿನ ಒಂದು ಅಂಶವಾಗಿದೆ ಎಂದು ಕೇರಳದ ಕಾರ್ಮಿಕ ಸಚಿವರು ತಿಳಿಸಿದರು. ಮುಷ್ಕರ ಮಾಡುವ ಹಕ್ಕನ್ನು ಕೂಡ ಕಾರ್ಮಿಕರಿಂದ ಕಿತ್ತುಕೊಳ್ಳಲಾಗಿದೆ. ಅಸ್ಸಾಂ, ಕರ್ನಾಟಕ, ಆಂಧ್ರದ ಕಾರ್ಮಿಕ ಸಚಿವರುಗಳು ಮಾತನಾಡಿ ಕಾರ್ಮಿಕ ವಿರೋಧಿ ವಿಧೇಯಕವನ್ನು ಖಂಡಿಸಿದರು.

ಸಿ.ಐ.ಟಿ.ಯು., ವಿ. ಮನೋರಂಜನ್ ರಾಯ್ ಸಮೇಳನಕ್ಕೆ ಶುಭ ಕೋರಿ ಮಾತನಾಡುತ್ತಾ 1926ರಷ್ಟು ಹಿಂದೆಯೇ ಕಾರ್ಮಿಕರು ಸಂಘಟನೆಯಾಗುವ ಹಾಗು ಮುಷ್ಕರ ನಡೆಸುವ ಹಕ್ಕಿಗಾಗಿ ಹೋರಾಡಿದನ್ನು ನೆನಪಿಸಿದರು. ಈಗ 62 ವರ್ಷಗಳ ನಂತರ ಅದೇ ಹಕ್ಕನ್ನು ಕಸಿದುಕೊಳ್ಳಲು ತಿದ್ದುಪಡಿಗಳನ್ನು ತರುತ್ತಿದ್ದಾರೆ. ಕಾರ್ಮಿಕ ವರ್ಗದ ಧೀಮಂತ ಪ್ರತಿಭಟನೆ ಮೂಡಿಬರಬೇಕೆಂದು ಅವರು ಕರೆ ಇತ್ತರು.

ಮಹಿಳೆಯರ ವಿರುದ್ಧ

ವಿಮಾನ ಯಾನ ಸಂಸ್ಥೆ ಪಕ್ಷಪಾತ

ಭಾರತದ ಸಂವಿಧಾನ ಲಿಂಗಬೇಧದ ಆಧಾರದಲ್ಲಿ ಎಲ್ಲಾ ಪಕ್ಷದ ರೀತಿ ನೀತಿಯನ್ನು ಕೊನೆಗೊಳಿಸಿದೆ ಎಂದು ಹೇಳಲಾಗುತ್ತಿದೆಯಾದರೂ ಭಾರತದ 'ವಿಮಾನ ಯಾನ ಸಂಸ್ಥೆ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಇಂತಹ ಪಕ್ಷಪಾತಿ ಧೋರಣೆ ಅನುಸರಿಸುತ್ತಿದೆ. ಈ ಎರಡೂ ಕಾರ್ಪೊರೇಶನ್‌ಗಳ ಕಾನೂನುಗಳು ಎಲ್ಲಾ ಗಗನ ಸಖಿಯರೂ 35ನೇ ವಯೋಮಾನ ತಲುಪಿದೊಡನೆಯೇ ನಿವೃತ್ತಿಯಾಗುವುದನ್ನು ಒತ್ತಾಯಿಸುತ್ತದೆ. ಈ ವಯೋಮಾನದ ನಂತರ ಈ ಕಾರ್ಪೊರೇಶನ್‌ಗಳು ವರ್ಷಂಪ್ರತೀ ಮುಂದುವರಿಕೆಯನ್ನು ಮಾತ್ರ 45ನೇ ವಯೋಮಾನದವರೆಗೆ ನೀಡುತ್ತದೆ. ಇದು ಅವರುಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಮಾತ್ರ ಸೇವೆಗೆ ಸೇರಿದ ಮೊದಲ 4 ವರ್ಷಗಳವರೆಗೆ ಮದುವೆಯಾಗುವಂತಿಲ್ಲ ಮಾತ್ರವಲ್ಲ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತಿಲ್ಲ. ಆದರೆ ಈ ನಿರ್ಬಂಧಗಳು ಗಗನ ಸಖಿಯರ ರೀತಿಯಲ್ಲೇ ಕೆಲಸ ನಿರ್ವಹಿಸುವ ಪುರುಷ ಕೆಲಸಗಾರರಿಗೆ ಲಗಾವಾಗುವುದಿಲ್ಲ.

ಈ ಗಗನ ಸಖಿಯರಿಗೆ ಅನುಭವ ಮತ್ತು ಸಾಮರ್ಥವಿದ್ದಾಗ್ಯೂ, ಆಂತರಿಕ ಹಾರಾಟದ ವಿಮಾನಗಳ ಮೇಲ್ವಿಚಾರಣೆಯ ಜವಾಬ್ದಾರಿ ಕೊಡಲಾಗುತ್ತಿಲ್ಲ. ಈ ಹುದ್ದೆ ಪುರುಷರಿಗೆ ಮಾತ್ರ ಮೀಸಲು!

ಏರ್‌ಇಂಡಿಯಾ ಸಂಸ್ಥೆಯಲ್ಲಿ ಗಗನ ಸಖಿಯರಾಗಿ ಸೇವೆ ಸಲ್ಲಿಸುತ್ತಿರುವ ವಿದೇಶಿ ಪೌರತ್ವದವರಿಗೆ ಅವರ ದೇಶದ ಕಾನೂನುಗಳ ರೀತ್ಯ 55 ರಿಂದ 60 ವರ್ಷದೊಳಗಡೆ ಮಾತ್ರ ನಿವೃತಿಗೊಳಿಸಗುತ್ತಿದೆ. ಇವರುಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಗೊಳಿಸಲಾಗುತ್ತಿಲ್ಲ. ಸುಪ್ರಿಂ ಕೋರ್ಟಿಗೆ 1987ರಲ್ಲಿ ಭರವಸೆ ನೀಡಿದ ಕಾರಣವಾಗಿ, 1988ರ ಮೇ ತಿಂಗಳಿಂದ ಮೊದಲ್ಗೊಂಡು ಯುರೋಪಿನ ಗಗನ ಸಖಿಯರನ್ನು ಹೊರ ತಳ್ಳುವ ಕೆಲಸ ಆರಂಭಿಸಿದೆ. ಜಪಾನಿ ಪೌರತ್ವದ ಸಖಿಯರಿಗೆ ಇದೆ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಭಾರತೀಯ ಗಗನ ಸಖಿಯರಿಗೆ 58 ವರ್ಷದವರೆಗೆ ದುಡಿಯುವ ಅವಕಾಶ ಇಲ್ಲದಾಗಿಸಲು ಈ ಪರೋಕ್ಷ ಕ್ರಮ ಜಾರಿಗೊಳಿಸಲಾಗುತ್ತಿದೆ.

45ನೇ ವರ್ಷದಲ್ಲೇ ನಿವೃತ್ತಿ ಹೊಂದುವುದರಿಂದಾಗಿ ಗಗನ ಸಖಿಯರು ಜೀವನದ ಮಧ್ಯದಲ್ಲೇ ನಿವೃತ್ತಿ ಬದುಕಿಗೆ ತಳ್ಳಲ್ಪಟ್ಟು ಸಮಾಜದಲ್ಲಿ ತಮ್ಮ ಸ್ವತಂತ್ರ ಸ್ಥಾನಮಾನ ಕಳೆದುಕೊಳ್ಳುವಂತಾಗಿದೆ.

ವೈಮಾನಿಕ ಖಾತೆ ಸಚಿವ ಶಿವರಾಜ್ ಪಟೇಲ್‌ರವರಿಗೆ ಇತ್ತೀಚೆಗೆ ಈ ನಿಟ್ಟಿನಲ್ಲಿ ಮನವಿ ಪತ್ರ ಸಲ್ಲಿಸಿದ ರಾಷ್ಟ್ರೀಯ ಆಂದೋಲನ ಸಮಿತಿ (ಎನ್.ಸಿ.ಸಿ.) ವಿಮಾನ ಯಾನ ಸಂಸ್ಥೆಗಳು ನಡೆಸುತ್ತಿರುವ ಪಕ್ಷಪಾತ ಧೋರಣೆಯನ್ನು ಕೈ ಬಿಡಬೇಕೆಂದು ಕೋರಿದೆ.

ನಿವೇಶನದ ಹಕ್ಕುಪತ್ರಕ್ಕೆ ಒತ್ತಾಯ

ಧಾರವಾಡ ಜಿಲ್ಲೆ ಹಾವೇರಿಯ ಅಶ್ವಿನಿ ನಗರದ ಕೃಷಿ ಕೂಲಿಗಾರರ ಸಭೆ ರೈತ ನಾಯಕ ಪಂಚಾಕ್ಷರಿಯವರ ಅಧ್ಯಕ್ಷತೆಯಲ್ಲಿ ನಡೆದು ಅಶ್ವಿನಿ ನಗರದಲ್ಲಿ ಹಲವಾರು ವರ್ಷಗಳಿಂದ ವಾಸ ಮಾಡುತ್ತಿರುವ ಜನತೆಗೆ ಕುಡಿಯುವ ನೀರು, ವಿದ್ಯುತ್, ಪಡಿತರ ಆಹಾರಧಾನ್ಯ ಸಿಗದಿರುವುದನ್ನು ಸಭೆ ಖಂಡಿಸಿತು. ಇಲ್ಲಿಯ ಜನರು ವಾಸಿಸುವ ನಿವೇಶನಗಳ ಹಕ್ಕು ಪತ್ರವನ್ನು ನೀಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾ॥ರುದ್ರಪ್ಪ ಜಾಬಿನ ಒತ್ತಾಯಿಸಿದರು. ಈ ಮೇಲ್ಕಂಡ ಬೇಡಿಕೆಗಳನ್ನು ಒತ್ತಾಯಿಸಿ ಸೆಪ್ಟೆಂಬರ್ ರೈತ ಚಳುವಳಿ ಸಂದರ್ಭದಲ್ಲಿ ಹಾವೇರಿ ತಾಲ್ಲೂಕು ಕಛೇರಿ ಪಿಕೆಟಿಂಗ್ ನಡೆಸಲು ನಿರ್ಣಯ ಕೈಗೊಳ್ಳಲಾಯಿತು.

ದೊಡ್ಡೇರಿ ಘಟಕ ರಚನೆ

ಪ್ರಾಂತ ರೈತಸಂಘದ ಭದ್ರಾವತಿ ತಾಲ್ಲೋಕು ಸಮಿತಿ ತಾಲ್ಲೋಕಿನ ಬಿಸಿಲಮನೆ, ದೊಡ್ಡೇರಿ, ಎಮ್ಮೆದೊಡ್ಡಿ, ನೆಟ್ಟ-ಕಲ್ಲಟ್ಟಿ, ಗಂಗೂರು ಗ್ರಾಮಗಳನ್ನೊಳಗೊಂಡ ರೈತರನ್ನು ಎಮ್ಮೆದೊಡ್ಡಿ ಗ್ರಾಮದಲ್ಲಿ ಜುಲೈ 18 ರಂದು ಸಭೆಸೇರಿಸಲಾಯಿತು. ತಾಲ್ಲೋಕು ಸಂಚಾಲಕ ಕಾ॥ ನರಸಿಂಹಯ್ಯನವರು ರೈತರನ್ನುದ್ದೇಶಿಸಿ ಮಾತನಾಡಿದರು. ನೂತನವಾಗಿ ರಚಿಸಲಾದ ದೊಡ್ಡೇರಿ ಘಟಕಕ್ಕೆ ಕಾ॥ ಅಜುಮಹಮದ್ (ಅಧ್ಯಕ್ಷ) ಕರಿಗೌಡ (ಕಾರ್ಯದರ್ಶಿ) ಚಂದ್ರಪ್ಪ (ಸಹಕಾರ್ಯದರ್ಶಿ) ಲಕ್ಷ್ಮೀಕಾಂತಪ್ಪ (ಖಜಾಂಚಿ) ಶಿವಮೂರ್ತಿಪ್ಪರವರನ್ನೊಳಗೊಂಡ 12 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಆಳಪೆ ಸಮ್ಮೇಳನ

ಮಂಗಳೂರಿನ ಬಳಿ ಇರುವ ಆಳಪೆಯ ಪಕ್ಷದ ಸಮ್ಮೇಳನ ಆಗಸ್ಟ್ 14ರಂದು ನೆರವೇರಿತು. ಕಳೆದ 15 ವರ್ಷದಿಂದ ಆಳಪೆಯ ಪ್ರದೇಶದಲ್ಲಿ ವಾಸವಿರುವ ಜನತೆಯ ಮನೆಗಳಿಗೆ ಹಕ್ಕುಪತ್ರ, ಹರಿಗೆ ಆಸ್ಪತ್ರೆ, ಹೆಚ್ಚು ಪಡಿತರ ಅಕ್ಕಿವಿತರಣೆ, ಏರಿಸಿರುವ ಬೆಲೆಗಳನ್ನು ಇಳಿಸಬೇಕು, ಮುಂತಾದ ಬೇಡಿಕೆಗಳ ಕುರಿತು ಸಮ್ಮೇಳನದಲ್ಲಿ ಠರಾವು ಅಂಗೀಕರಿಸಲಾಯಿತು.

ರೈತ ಹುತಾತ್ಮರ ಸ್ಮರಣೆ

ಕರ್ನಾಟಕ ರಾಜ್ಯದ ರೈತ ಚಳುವಳಿಯಲ್ಲಿ ಇತಿಹಾಸ ನಿರ್ಮಿಸಿದ ನರಗುಂದ ನವಲಗುಂದ, ಸವದತ್ತಿ ರೈತರು ಹುತಾತ್ಮರಾಗಿ ಇಂದಿಗೆ 8 ವರ್ಷಗಳು ಕಳೆದವು. 1980 ರ ಜುಲೈ 21 ರಂದು ಆ ಧೀರ ರೈತರು ಯಾವ ಧ್ಯೇಯಗಳಿಗಾಗಿ ತ್ಯಾಗ-ಬಲಿದಾನ ಮಾಡಿದರೋ ಅವರ ಗುರಿಗಳನ್ನು ಇಂದಿನ ರೈತ ಸಮುದಾಯ ಮುಂದೆ ಕೊಂಡೊಯ್ಯಲು ಪ್ರತಿಜ್ಞೆ ಸ್ವೀಕರಿಸುವ ಸಲುವಾಗಿ ಜುಲೈ 21 ರಂದು ಸವದತ್ತಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಹುತಾತ್ಮರ ಸ್ಮರಣೆ ದಿನವನ್ನು ಆಚರಿಸಲಾಯಿತು.

ಈಶ್ವರಪ್ಪ ಕಡ್ಲಿಕೊಪ್ಪ, ಬಸಪ್ಪಲಕ್ಕುಂಡಿ, ಮುಂತಾದ 140 ರೈತ ಹುತಾತ್ಮರ ಸ್ಮರಣೆಗೆ ನಡೆಸಲಾದ ಸಭೆಯ ಅಧ್ಯಕ್ಷತೆಯನ್ನು ಅಂದಿನ ರೈತ ಚಳುವಳಿಯ ಪ್ರೇರಕ ಶಕ್ತಿಯಾಗಿದ್ದ ಇಂದಿನ ಪ್ರಾಂತ ರೈತ ಸಂಘದ ರಾಜ್ಯ ನಾಯಕ ಕಾ॥ ವಿ. ಎನ್. ಹಳಕಟ್ಟಿಯವರು ವಹಿಸಿದ್ದರು.

ರೈತ ಸಂಘ, ವಿದ್ಯಾರ್ಥಿ ಯುವಜನ ಸಂಘಟನೆಗಳ ಕಾರ್ಯಕರ್ತರು ಮೆರವಣಿಗೆಯಲ್ಲಿ ಹುತಾತ್ಮರ ಭಾವ ಚಿತ್ರಗಳನ್ನು ಹೊತ್ತು ಸಾಗಿ ಗಾಂಧಿ ಚೌಕದಲ್ಲಿ ಸಭೆ ಸೇರಲಾಯಿತು.

ರಾಜ್ಯ ವಿಧಾನ ಸಭೆ ಉಪಾಧ್ಯಕ್ಷ ಬಿ. ಆರ್. ಯಾವಗಲ್, ವಿಧಾನ ಸಭೆ ಸದಸ್ಯ ಬಾಬುರೆಡ್ಡಿ ತುಂಗಳ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹುತಾತ್ಮರ ಬಗ್ಗೆ ಹಾಗೂ ಮುಂದಿನ ಚಳುವಳಿ ಕುರಿತು ಮಾತನಾಡಿದರು. ಮಲಪ್ರಭಾ ನದಿಗೆ ಮಹಾದಾಯಿ ನದಿಯನ್ನು ಜೋಡಿಸಬೇಕೆಂಬ ಬೇಡಿಕೆ ಕುರಿತು ಹಾಗೂ ಒತ್ತುವರಿ ರೈತರನ್ನು ಒಕ್ಕಲೆಬ್ಬಿಸುತ್ತಿರುವ ಅರಣ್ಯಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಹೋರಾಟ ರೂಪಿಸಲು ಕರೆ ನೀಡಲಾಯಿತು.

ಜಿ. ಬಿ. ಕೋರಗಲ್ಲರ ವಂದನಾರ್ಪಣೆ ಹಾಗೂ ಘೋಷಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಡಿ. ವೈ. ಎಫ್. ಐ. ಸುದ್ದಿಗಳು

ಕಾಲ್ನಡೆ ಜಾಥ

ಜುಲೈ 17 ರಂದು ಡಿ.ವೈ.ಎಫ್.ಐ. ಮಂಗಳೂರು ಘಟಕದ ಆಶ್ರಯದಲ್ಲಿ ಪಡಿತರ ಅಕ್ಕಿ ಕಡಿತ ಮತ್ತು ಬೆಲೆ ಏರಿಕೆ ವಿರುದ್ಧ ತಾಲ್ಲೋಕಿನ ಉಳ್ಳಾಲ-ಕೊಂಚಾಡಿ ಮತ್ತು ಜಪ್ಪಿನ ಮೊಗರುಗಳಿಂದ 3 ಜಾಥಾಗಳನ್ನು ನಡೆಸಿ ಜನ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಸುಮಾರು250 ಮಂದಿ ಸ್ವಯಂ ಸೇವಕರು ಕಾಲ್ನಡೆ ಜಾಥ, ಗ್ರಾಮಸಭೆಗಳನ್ನು ನಡೆಸಿತು. ಕಾ|| ರಮೇಶ್ ಉಳ್ಳಾಲ್, ಸುನಿಲ್ ನಟೇಕರ್, ಸದಾಶಿವಶೆಟ್ಟಿ ಮತ್ತು ಚಂದ್ರಹಾಸರವರು ಈ ಜಾಥಗಳ ನೇತೃತ್ವ ವಹಿಸಿದ್ದರು. ಸಂಜೆ ಮಂಗಳೂರಿನ ಬಾವುಟ ಗುಡ್ಡೆಯಲ್ಲಿ 3 ಜಾಥ ಸೇರಿ ನೆಹರೂ ಮೈದಾನಕ್ಕೆ ಮೆರವಣಿಗೆಯಲ್ಲಿ ಬಂದು ಬಹಿರಂಗ ಸಭೆ ನಡೆಸಲಾಯಿತು. ಕಾ|| ಬಿ.ಎಂ. ರಾಮಯ್ಯಶೆಟ್ಟಿ, ಬಿ.ಎಂ. ಮಾದವರವರು ಮಾತನಾಡಿದರು. ಕಾ|| ಜೆ. ಸದಾಶಿವಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ನದಿ ಜೋಡಣೆಗೆ ಒತ್ತಾಯ

ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೋಕಿನ ಹಂಚಿನಾಳ ಗ್ರಾಮದಲ್ಲಿ ಡಿ.ವೈ.ಎಫ್.ಐ. ಆಶ್ರಯದಲ್ಲಿ ಜುಲೈ 14 ರಂದು ಸುಮಾರು 400 ಮಂದಿ ರೈತರು ಸಭೆ ನಡೆಸಿ ಮಲ್ಲಪ್ರಭಾ ನದಿಗೆ ಮಹಾದಾಯಿ ನದಿಯನ್ನು ಕೂಡಿಸಬೇಕೆಂದು ಒತ್ತಾಯಿಸುವ ನಿರ್ಣಯ ಅಂಗೀಕರಿಸಿ, ಈ ಪ್ರದೇಶದ ರೈತರನ್ನು ಸಂಘಟಿಸಿ ಈ ಬೇಡಿಕೆಗಾಗಿ ಹೋರಾಟ ರೂಪಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಎಲ್. ಎಸ್. ನಾಯಕ್; ತೋರಗಲ್, ಬಿ. ಎಂ. ಹೊರಕೇರಿ, ಎಂ.ಸಿ. ಹಿರೇಮಠ, ಮುಂತಾದವರು ಮಾತನಾಡಿದರು.

ಭದ್ರಾವತಿ ತಾಲ್ಲೋಕು ಘಟಕ

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೋಕು ಘಟಕವನ್ನು ಜುಲೈ 10 ರಂದು ಭದ್ರಾವತಿಯ ತಾಷ್ಕೆಂಟ್ ನಗರದಲ್ಲಿ ನಡೆದ ಸಭೆಯಲ್ಲಿ ರಚಿಸಲಾಯಿತು. ಕಾ|| ಕೆ. ರಾಮಚಂದ್ರರವರು ಅಧ್ಯಕ್ಷತೆ ವಹಿಸಿದ್ದರು. ನೂತನ ತಾಲ್ಲೋಕು ಘಟಕಕ್ಕೆ ಕಾ|| ಪಿ.ಸಿ. ಮುತ್ತು(ಅಧ್ಯಕ್ಷ) ಶ್ರೀನಿವಾಸ್(ಉಪಾಧ್ಯಕ್ಷ) ಎ. ಚಂದ ಪ್ಪ (ಕಾರ್ಯದರ್ಶಿ) ಟಿ.ಎನ್. ಮಣಿ (ಸಹಕಾರ್ಯದರ್ಶಿ) ರತ್ನಕುಮಾರ್ (ಖಜಾಂಚಿ) ಯವರನ್ನೊಳಗೊಂಡ 15 ಜನರ ಸಮಿತಿಯನ್ನು ರಚಿಸಲಾಯಿತು. ಕಾ|| ಬಿ. ಎ. ಸುಂದರ್, ಮಲರ್ ಸೆಲ್ವಂ, ಜಿ. ಶಿವಣ್ಣ ಹಾಗೂ ಪಿ. ಶಿವರಾಂರವರು ಸಭೆಯಲ್ಲಿ ಮಾತನಾಡಿದರು.

ಸಂಡೂರಿನಲ್ಲಿ ಶಿಬಿರ

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೋಕು ಶಿಬಿರವನ್ನು ನಡೆಸಲಾಯಿತು. ಕಾ|| ಪ್ರದೀಪ್‌ಕುಮಾರ್ ಪ್ರಸಕ್ತ ರಾಜಕೀಯ ಪರಿಸ್ಥಿತಿ ಕುರಿತು, ಡಿ.ವೈ.ಎಫ್.ಐ. ಸಂವಿಧಾನ, ಕಾರ್ಯಕ್ರಮ ಕುರಿತು ಕಾ|| ಸುರೇಶ್‌ಕುಷ್ಟಗಿಯವರು ಉಪನ್ಯಾಸ ನೀಡಿದರು. ಕಾ|| ಷಣ್ಮುಖಪ್ಪ ಶಿಬಿರ ಉದ್ಘಾಟಿಸಿದರು. ನೂತನ ತಾಲ್ಲೋಕು ಸಮಿತಿಯನ್ನು ಈ ಸಂದರ್ಭದಲ್ಲಿ ರಚಿಸಲಾಯಿತು. ಕಾ|| ವಿ. ಮಾರೆಪ್ಪ (ಅಧ್ಯಕ್ಷ) ಸುಬ್ಬಯ್ಯ (ಉಪಾಧ್ಯಕ್ಷ) ಅಂಜನಪ್ಪ (ಸಹಉಪಾಧ್ಯಕ್ಷ) ಹನುಮಂತಪ್ಪ (ಕಾರ್ಯದರ್ಶಿ) ಸಯ್ಯದ್ ಅಬ್ದುಲ್ (ಸಹಕಾರ್ಯದರ್ಶಿ) ಯವರುಗಳನ್ನು ಆಯ್ಕೆಮಾಡಲಾಯಿತು.

ಮುಳಬಾಗಿಲು ತಾಲ್ಲೋಕು ಘಟಕ

ಇಂದಿನ ಯುವಜನಾಂಗ ಹಿಡಿದಿರುವ ದುಷ್ಟಹಾದಿಯ ಫಲವಾಗಿ ಹಲವಾರು ತೀವ್ರತರ ಸಮಸ್ಯೆಗಳನ್ನು ಎದುರಿಸುತ್ತಿದ್ದು ಡಿ.ವೈ ಎಫ್.ಐ.ಸಂಘಟನೆ ಇಂತಹ ಯುವಜನತೆಯನ್ನು ಸಂಘಟಿಸಿ ಅವರನ್ನು ಬಾಧಿಸುತ್ತಿರುವ ನಿರುದ್ಯೋಗ, ಬಡತನ, ಮಹಿಳೆಯರ ಮೇಲಿನ ದಬ್ಬಾಳಿಕೆ ವಿರುದ್ಧ ಹೋರಾಟ ಬೆಳೆಸಲು ರಾಜ್ಯ ಅಧ್ಯಕ್ಷ ಕಾ|| ಹೆಚ್.ಎನ್. ನಾಗಮೋಹನ್‌ದಾಸ್‌ರವರು ಕರೆ ನೀಡಿದರು. ಅವರು ಆಗಸ್ಟ್ 18 ರಂದು ಮುಳಬಾಗಿಲಿನಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಜಿಲ್ಲಾ ಕಾರ್ಯದರ್ಶಿ ಕಾ|| ಎಂ.ಎಸ್. ಆನಂದ್, ಕಾ|| ಎಂ. ಗೋಪಾಲ್, ಹಾಗೂ ಮುನಿಸ್ವಾಮಿಯವರುಗಳು ಸಭೆಯಲ್ಲಿ ಮಾತನಾಡಿದರು.

ನೂತನ ತಾಲ್ಲೋಕು ಸಮಿತಿಗೆ ಕಾ|| ಕೆ.ಆರ್. ರಾಜಣ್ಣ (ಅಧ್ಯಕ್ಷ) ವಿ. ನಾಗರಾಜ (ಉಪಾಧ್ಯಕ್ಷ) ಎಂ. ಮುನಿಸ್ವಾಮಿ (ಪ್ರ.ಕಾರ್ಯದರ್ಶಿ) ಇರಷಾದ್ (ಸಹಕಾರ್ಯದರ್ಶಿ) ಎಂ. ಭಾಸ್ಕರ(ಖಜಾಂಚಿ) ಯವರುಗಳನ್ನು ಆಯ್ಕೆಮಾಡಲಾಯಿತು.

ಕಾಲ್ನಡಿಗೆ ಜಾಥ-ಮಂಡಲ್ ಚಲೋ

ಹೊಸಪೇಟೆಯ ಅನಂತಶಯನ ಗುಡಿ ಘಟಕ ಜುಲೈ 28 ರಂದು ಸ್ಥಳೀಯ ಜನತೆಗೆ ಬಾಧಿಸುತ್ತಿರುವ ನಿವೇಶನರಹಿತರಿಗೆ ನಿವೇಶನ, ಹಕ್ಕುಪತ್ರ, ಹಸಿರು ಕಾರ್ಡು, ಬೀದಿದೀಪ, ನೀರಿನಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಸುಮಾರು 400 ಜನರ ಜಾಥ ಸಂಘಟಿಸಿತು. ಸುರಿಯುವ ಮಳೆಯಲ್ಲೇ ಮಂಡಲ್ ಪಂಚಾಯಿತ್ತಿ ಕಛೇರಿಗೆ ಜಾಥದಲ್ಲಿ ಬಂದ ಜನತೆ ಮಂಡಲ್ ಪ್ರಧಾನರಿಗೆ ಬೇಡಿಕೆಗಳ ಮನವಿಪತ್ರವನ್ನು ಅರ್ಪಿಸಿತು. ಈ ಕುರಿತು ಮುಂದಿನ ಸಭೆಯಲ್ಲಿ ಚರ್ಚಿವುದಾಗಿ ಪ್ರಧಾನರು ಆಶ್ವಾಸನೆ ನೀಡಿದರು.

ಕಾ|| ಜೆ. ಪಿ. ರಾಮನಾಥ್, ಕಲಾಲ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾ|| ಪ್ರಕಾಶ್, ಅಮೀರ್, ಕಾಸಿಂ ಮತ್ತು ನೀಲಕಂಠರವರು ಹೋರಾಟದಲ್ಲಿ ಭಾಗವಹಿಸಿ ನೇತೃತ್ವ ನೀಡಿದರು.

ಕಾರ್ಯಕರ್ತರ ಸಭೆ

ಹೊಸಪೇಟೆ ತಾಲ್ಲೋಕು ಮಟ್ಟದ ಕಾರ್ಯಕರ್ತರ ಸಭೆ ಜುಲೈ 22 ರಂದು ಕಾ|| ಪಾಂಡುರಂಗರ ಅಧ್ಯಕ್ಷತೆಯಲ್ಲಿ ಜರುಗಿತು. ಪಂಜಾಬ್‌ನಲ್ಲಿ 59 ನೇ ತಿದ್ದುಪಡಿಯನ್ನು ಜಾರಿಗೊಳಿಸಿ ತುರ್ತುಪರಿಸ್ಥಿತಿಯನ್ನು ಹೇರುವ, ತ್ರಿಪುರಾದಲ್ಲಿ ಆದಿವಾಸಿ ಮಹಿಳೆಯರ ಮೇಲೆ ಬರ್ಬರ ಕೃತ್ಯದ ಮೂಲಕ ಸರ್ವಾಧಿಕಾರಿ ರೀತಿಯಲ್ಲಿ ಆಡಳಿತ ನಡೆಸುತ್ತಿರುವ ರಾಜೀವ ಗಾಂಧಿ ಸರ್ಕಾರ ಜನತೆಯ ಹಿತಾಸಕ್ತಿ ಕಾಪಾಡುವಲ್ಲಿ ವಿಫಲಗೊಂಡಿದೆ ಎಂದು ಆರೋಪಿಸಲಾಯಿತು. ನೂತನ ತಾಲ್ಲೋಕು ಸಮಿತಿಗೆ ಕಾ|| ಪಾಂಡುರಂಗ ಸಂಚಾಲಕರಾಗಿ ಹಾಗೂ ಸಹಸಂಚಾಲಕರಾಗಿ ಕಾ|| ಸೋಮಪ್ಪ, ಚಂದ್ರಬಾಬು, ವೆಂಕಟರಮಣ, ಮತ್ತು ಕುಮಾರ್ ರವರುಗಳು ಆಯ್ಕೆಗೊಂಡರು.

ಹೊಸಪೇಟೆ ತಾಲ್ಲೋಕು ಸಮ್ಮೇಳನವನ್ನು ಸೆಪ್ಟೆಂಬರ್ 9 ರಂದು ಟಿ. ಬಿ. ಡ್ಯಾಂನಲ್ಲಿ ನಡೆಸಲು ಸಭೆ ತೀರ್ಮಾನಿಸಿತು.

ದಾಸರಹಳ್ಳಿಯಲ್ಲಿ ಉಚಿತ ಪಾಠಶಾಲೆ

ಬೆಂಗಳೂರು ನಗರದ ದಾಸರಹಳ್ಳಿ ಡಿ.ವೈ.ಎಫ್.ಐ. ಘಟಕವು ಕಳೆದ ವರ್ಷದಿಂದ ಪ್ರದೇಶದಲ್ಲಿ ಶಾಲಾ ಮಕ್ಕಳಿಗೆ ರಾತ್ರಿ ಉಚಿತ ಪಾಠಶಾಲೆ ನಡೆಸುತ್ತಿದ್ದು ಈ ವರ್ಷ ಅದನ್ನು ಮುಂದುವರಿಸಿದೆ. ಈ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹದಾಯಕವಾಗಿ 7-8-1988 ರಂದು ಸುಮಾರು 50 ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಸ್ಥಳೀಯ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಚಿಕ್ಕಣ್ಣರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಭೂನ್ಯಾಯ ಮಂಡಳಿ ಸದಸ್ಯರಾದ ಬಿ.ಟಿ.ವಿ.ರಾಜು, ಡಿ.ವೈ.ಎಫ್.ಐ ಮುಖಂಡರುಗಳಾದ ಎಸ್. ಶಿವರಾಂ, ಟಿ. ಶಿವಶಂಕರ್, ಆರ್. ಜಯಕುಮಾರ್, ಶಾಂತಕುಮಾರಿ ರವರುಗಳು ಸಮಾರಂಭದಲ್ಲಿ ಮಾತನಾಡಿ ಕೇಂದ್ರ ಸರ್ಕಾರದ ಶ್ರೀಮಂತರ ಶಿಕ್ಷಣ ನೀತಿಯನ್ನು ಉಗ್ರವಾಗಿ ಖಂಡಿಸಿದರು.

ಮೊದಲಿಗೆ ಘಟಕದ ಕಾರ್ಯದರ್ಶಿ ನಂಜರಾಜ್ ಸ್ವಾಗತಿಸಿದರು. ಮಕ್ಕಳ ಪಾಲಕರು, ವಿದ್ಯಾರ್ಥಿಗಳು, ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿದ್ದರು. ಶ್ರೀರಾಮಪುರಂ ಸಮುದಾಯ ತಂಡದವರು "ಹೊಳ್ಳಿ"ನಾಟಕ ಪ್ರದರ್ಶಿಸಿದರು.

ಮೈಕೋ ಚುನಾವಣೆಯಲ್ಲಿ ಕಾ|| ಸೂರಿ ಮರು ಆಯ್ಕೆ

ಆಗಸ್ಟ್ 10 ರಂದು ನಡೆದಮೈಕೋ ಕಾರ್ಖಾನೆಯ 1988-89 ನೇ ಸಾಲಿನ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಮೈಕೋ ಎಂಪ್ಲಾಯೀಸ್ ಅಸೋಸಿಯೇಶನ್‌ನಿಂದ ಸ್ಪರ್ಧಿಸಿದ್ದ ಎಲ್ಲಾ ಪದಾಧಿಕಾರಿಗಳು ಅತ್ಯಧಿಕ ಬಹುಮತದಿಂದ ಚುನಾಯಿತರಾಗಿದ್ದಾರೆ. ಸಿ.ಐ.ಟಿ.ಯು. ಅಖಿಲ ಭಾರತ ಉಪಾಧ್ಯಕ್ಷರು ಹಾಗೂ ರಾಜ್ಯ ಅಧ್ಯಕ್ಷರಾದ ಕಾ|| ಎಸ್. ಸೂರ್ಯನಾರಾಯಣರಾವ್ ರವರು ಸತತವಾಗಿ 4 ನೇ ಬಾರಿಗೆ ಸಂಘದ ಅಧ್ಯಕ್ಷರಾಗಿ ಮರು ಆಯ್ಕೆಗೊಂಡಿದ್ದಾರೆ.

ಕಾ|| ಎಸ್. ಸೂರ್ಯನಾರಾಯಣರಾವ್	(ಅಧ್ಯಕ್ಷರು)
ಎ. ಜಿ. ಶೇಷಪ್ಪ	(ಉಪಾಧ್ಯಕ್ಷರು)
ಬಿ. ಮುಂಡಪ್ಪ	,,
ಎನ್. ವೀರಾಸ್ವಾಮಿ	(ಪ್ರಧಾನ ಕಾರ್ಯದರ್ಶಿ)
ಟಿ. ಶಿವಶಂಕರ್	(ಸಹ ಕಾರ್ಯದರ್ಶಿ)
ಶಂಕರೇಗೌಡ	(ಖಜಾಂಚಿ)

ತ್ರಿಪುರಾ ನಿಧಿಗೆ ನೆರವು

ಕಾಂಗ್ರೆ-ಟಿ.ಯು.ಜೆ.ಎಸ್‌ನ ಅಮಾನುಷ ಕೃತ್ಯಗಳನ್ನು ಎದುರಿಸಿ ಹೋರಾಡುತ್ತಿರುವ ತ್ರಿಪುರಾದ ಜನತೆಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲು ಸಿ.ಐ.ಟಿ.ಯು. ಕೇಂದ್ರ ಸಮಿತಿ ನೀಡಿದ ಕರೆಯಂತೆ ಬೆಂಗಳೂರಿನ ಕೆ.ಆರ್.ಪುರಂ ಪ್ರದೇಶದ ಬೆಂಗಳೂರು ಈಸ್ಟ್ ಇಂಡಸ್ಟ್ರೀಯಲ್ ವರ್ಕರ್ಸ್ ಯುನಿಯನ್ (ಸಿ.ಐ.ಟಿ.ಯು.)ಗೆ ಸೇರಿದ ಕಾರ್ಮಿಕ ಸಂಘಗಳು ನೀಡಿದ ತ್ರಿಪುರಾ ಫಂಡ್ ವಿವರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

1.	ಆರ್.ಐ.ಸಿ. ಮತ್ತು ಜಿ.ಎಂ.ಇ.	275
2.	ಗೇರ್ಸ್ ಅಂಡ್ ಪಿನಿಯನ್ಸ್	50
3.	ಪೆರಿವಾಳ್ ಪ್ಲಾಸ್ಟಿಕ್	50
4.	ಯುನೈಟೆಡ್ ಆಕ್ಸಿಜನ್	50
5.	ಗೇರ್ಸ್ ಅಂಡ್ ಟ್ರಾನ್ಸ್‌ಮಿಷನ್	75
6.	ಮೆಟಲ್ಲರ್ಜಿ ಎಕ್ವಿಪ್‌ಮೆಂಟ್	25
7.	ಇಂಡಸ್ಟ್ರೀಯಲ್ ಪಂಚಸ್	25
8.	ಹಾರವುಡ್ ಗಾರಮೆಂಟ್ಸ್	25
9.	ಗೇರ್ಸ್ ಅಂಡ್ ಗೇರ್ಸ್ ಡ್ರೈವ್ಸ್	25
10.	ನಾಗಲಕ್ಷ್ಮಿ ಇಂಡಸ್ಟ್ರೀಸ್	25
11.	ಲೋಹರ್ ಸ್ಟೀಲ್	100
12.	ಮೆಕನಲಿ ಭಾರತ	25
13.	ಯು.ಕೆ.ಎನ್. ಇಂಡಿಯಾ	25
14.	ಲಕ್ಷ್ಮಿ ಇಂಡಸ್ಟ್ರೀ	25
15.	ಯುನಿವರ್ಸಲ್ ಇಂಜನೀಯರ್ಸ್	25
16.	ಸ್ಯಾಜಸನ್ ಇಂಡಿಯಾ	15
17.	ಸಿ.ಎಸ್.ಐ.ಡಿ.	15
18.	ಮೋಹನ್ ಇಂಡಸ್ಟ್ರೀ	25
19.	ಮೈಸೂರು ವೈನ್ಸ್ ಅಂಡ್ ಅಲೈಯ್ಡ್ಸ್ ಪ್ರೊಡಾಕ್ಟ್ಸ್ ಎಂಪ್ಲಾಯೀಸ್ ಯೂನಿಯನ್	500
20.	ಡೈನಾಮಿಕ್ ರಬ್ಬರ್ ಅಂಡ್ ಪ್ಲಾಸ್ಟಿಕ್ ವರ್ಕರ್ಸ್ ಯುನಿಯನ್	101
21.	ಜಿ. ಆರ್. ಇಂಜಿನಿಯರಿಂಗ್ ಎಂಪ್ಲಾಯೀಸ್ ಯುನಿಯನ್	300
22.	ಆಂಧ್ರ ಮತ್ತು ಸದರನ್ ಸ್ಟೀಲ್ ಎಂಪ್ಲಾಯೀಸ್ ಯುನಿಯನ್	100
23.	ವಿ. ಎಸ್. ಟಿ. ಎಂಪ್ಲಾಯೀಸ್ ಅಂಡ್ ಜನರಲ್ ವರ್ಕರ್ಸ್ ಯುನಿಯನ್	50
24.	ಫೆದರ್ ಲೈಟ್ ಕಾರ್ಪೋರೇಷನ್ ಎಂಪ್ಲಾಯೀಸ್ ಯುನಿಯನ್	101
25.	ಕ್ಯಾಪ್ ಸ್ಟೀಲ್ ಎಂಪ್ಲಾಯೀಸ್ ಯುನಿಯನ್	50
26.	ವೈಕಾನ್ ಎಂಪ್ಲಾಯೀಸ್ ಯುನಿಯನ್	50
27.	ಟಿನ್ ಫ್ಯಾಕ್ಟರಿ ಎಂಪ್ಲಾಯೀಸ್ ಅಸೋಸಿಯೇಷನ್	50
	ಒಟ್ಟು	2182

ಎಸ್. ಎಫ್. ಐ. ಸುದ್ದಿಗಳು

ಸುಗ್ರಿವಾಜ್ಞೆ ಪ್ರತಿಭಟಿಸಿ ಬೃಹತ್ ರ್‍ಯಾಲಿ

ಕರ್ನಾಟಕ ಸರ್ಕಾರವು ಪರೀಕ್ಷೆಯಲ್ಲಿ ಕಾಪಿ ಪಿಡುಗನ್ನು ನಿವಾರಿಸುವ ನೆಪದಲ್ಲಿ ಹೊಸ ಸುಗ್ರಿವಾಜ್ಞೆಯನ್ನು ಹೊರಡಿಸುವುದನ್ನು ಪ್ರತಿಭಟಿಸಿ ಬಳ್ಳಾರಿ ಜಿಲ್ಲೆ ಹೊಸಪೇಟೆ ನಗರ ಸಮಿತಿ ಆಶ್ರಯದಲ್ಲಿ ಜುಲೈ 12 ರಂದು ಮೂರು ಸಹಸ್ರ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಬೃಹತ್ ರ್‍ಯಾಲಿಯೊಂದನ್ನು ಹೊರಡಿಸಿ ತಹಸೀಲ್ದಾರ್‌ರವರ ಮೂಲಕ ರಾಜ್ಯಪಾಲರಿಗೆ ಮನವಿ ಅರ್ಪಿಸಲಾಯಿತು.

ಪೋಲಿಸರು ಪರೀಕ್ಷಾ ಕೊಠಡಿ ಪ್ರವೇಶಿಸಿ ವಿಚಾರಣೆಯಿಲ್ಲದೆ ಬಂಧಿಸಿ 3 ತಿಂಗಳಿಂದ 1 ವರ್ಷದವರೆಗೆ ಜೈಲಿನಲ್ಲಿಡುವ 3 ಸಾವಿರದವರೆಗೆ ದಂಡವಿಧಿಸಲು ಸುಗ್ರೀವಾಜ್ಞೆ ಅವಕಾಶ ಮಾಡಿಕೊಡುತ್ತದೆ. ಎಸ್.ಎಫ್.ಐ. ಸಂಘಟನೆ ಕಾಪಿಯನ್ನು ಮೊದಲಿನಿಂದಲೂ ಪ್ರತಿಭಟಿಸುತ್ತಾ ಬಂದಿದೆ. ಈಗಿರುವ ಕಾನೂನಿನ ಮೂಲಕ ಕಾಪಿ ಮಾಡಿದವರನ್ನು ಶಿಕ್ಷಿಸಲು ಸಾಕಷ್ಟು ಅವಕಾಶವಿರುವಾಗ ಸುಗ್ರಿವಾಜ್ಞೆ ಮೂಲಕ ಪೋಲೀಸ್ ಸಹಾಯದಿಂದ ಪರೀಕ್ಷೆ ನಡೆಸುವ ಹಾಗೂ ಶಿಕ್ಷಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಸಿದುಕೊಳ್ಳುವ ಈ ಸುಗ್ರಿವಾಜ್ಞೆಯನ್ನು ಕೂಡಲೆ ಹಿಂತೆಗೆದು ಕೊಳ್ಳಬೇಕೆಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಎಸ್.ಎಫ್.ಐ. ನಾಯಕರಾದ ಕಾ|| ನೀಲಕಂಠ ಹಾಗೂ ಕೆ. ಅಮೀರ್ ರವರು ರಾಜ್ಯಪಾಲರನ್ನು ಒತ್ತಾಯಿಸಿದರು. ಕಾ|| ಶಿವಪ್ರಕಾಶ್, ಕುಮಾರಗೌಡ, ಜಯಸಿಂಹ, ಅಶೋಕ, ಕಾಸಿಂ ಅಲಿಯವರು ರ್‍ಯಾಲಿಯ ನೇತೃತ್ವವಹಿಸಿದ್ದರು.

ಇಟಗಿ ಘಟಕ ರಚನೆ

ಎಸ್.ಎಫ್.ಐ. ಧಾರವಾಡ ಜಿಲ್ಲೆ ರೋಣಾ ತಾಲ್ಲೋಕು ಇಟಗಿಯಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆ ಘಟಕವನ್ನು ಅಬ್ಬಗೇರಿ ವಿರೂಪಾಕ್ಷಪ್ಪ ಉದ್ಘಾಟಿಸಿದರು. ಡಿ.ವೈ.ಎಫ್.ಐ. ರಾಯಚೂರು ಜಿಲ್ಲಾ ಅಧ್ಯಕ್ಷ ಗಂಗಾಧರ ಕುಷ್ಟಗಿಯವರು ಅತಿಥಿಗಳಾಗಿದ್ದರು. ವಿಜಯಕುಮಾರ ಸರ್‌ದೇಸಾಯಿಯವರು ಅಧ್ಯಕ್ಷತೆ ವಹಿಸಿದ್ದರು.

ನೂತನ ಘಟಕದ ಸಂಘಟನಾ ಸಮಿತಿಗೆ ಎಸ್.ಎಂ. ಪಾಟೀಲ್ ಸಂಚಾಲಕರಾಗಿ ಪಿ.ಎನ್. ಭಂಡಾರಿಮಠ ಸಹಸಂಚಾಲಕರಾಗಿ ಹಾಗೂ ಭಂಡಿವಡ್ಡರವರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.

ಸ್ವಾತಂತ್ರ್ಯ ದಿನ: ಎರಡು ಸಂದೇಶಗಳು

(1ನೇ ಪುಟದಿಂದ)

ಹಿಡಿದಿರುವ ಅಪವಾದಗಳನ್ನು ಬಿಟ್ಟರೆ, ಕಾನೂನು ಮತ್ತು ಸಂವಿಧಾನಕ್ಕೆ ವಿರುದ್ಧವಾದ ಮಾರ್ಗಗಳ ಮೂಲಕ ಚುನಾವಣಾ ಪ್ರಕ್ರಿಯೆ ಬುಡಮೇಲು ಮಾಡುವ ಪ್ರಯತ್ನಗಳಿಗೆ ಮೂಲ ಆಳುವ ಕಾಂಗ್ರೆಸ್ (ಐ) ಎಂದು ಯಾರಾದರೂ ಒಪ್ಪಿಕೊಳ್ಳಲೇಬೇಕು. ರಾಷ್ಟ್ರಪತಿಗಳ ಸಂದೇಶದ ಮುಂಚಿನ ಒಂದು ತಿಂಗಳಲ್ಲಿ ಇಂತಹ ಎರಡು ಘಟನೆಗಳು ನಡೆದಿವೆ. ಈ ಘಟನೆಗಳು ಆಳುವ ಪಕ್ಷದ ನಿಜವಾದ ಬಣ್ಣ ತೋರಿಸಿವೆ.

ಮೊದಲನೆಯ ಘಟನೆ ಕಾಂಗ್ರೆಸ್ ವಿಧಾನ ಸಭೆಯಲ್ಲಿ ಬಹುಮತ ಕಳೆದುಹೋದ ಮೇಲೆ ನಾಗಾಲ್ಯಾಂಡ್‌ನಲ್ಲಿ ಸಂಪೂರ್ಣವಾಗಿ ಅಸಮರ್ಪಕ ಅನ್ಯಾಯಯುತ ರಾಷ್ಟ್ರಪತಿ ಶಾಸನದ ಹೇರಿಕೆ. ಎರಡನೆಯದು ತಮಿಳುನಾಡಿನಲ್ಲಿ ರಾಷ್ಟ್ರಪತಿ ಶಾಸನದ ಮುಂದುವರಿಕೆ. ಈ ಎರಡನ್ನೂ ಯಾವುದೇ ರೀತಿಯಲ್ಲಿ ತರ್ಕಬದ್ಧವಾದುದಾಗಲಿ, ನ್ಯಾಯಯುತವಾದುದಾಗಲಿ ಎಂದು ಹೇಳಲು ಸಾಧ್ಯವಿಲ್ಲ. ಮೊದಲನೆಯದರಲ್ಲಿ ಕಾಂಗ್ರೆಸ್ಸೇತರ ಪಕ್ಷವೊಂದಕ್ಕೆ ಬಹುಮತ ಇರುವಾಗ ಅದನ್ನು ಸರ್ಕಾರ ರಚಿಸಲು ಕರೆಯದೆ ಕೇಂದ್ರದಲ್ಲಿರುವ ದಣಿಯ ತಾಳಕ್ಕೆ ತಕ್ಕುದಾಗಿ ಗವರ್ನರ ಕುಣಿದರೆ, ಎರಡನೆಯದರಲ್ಲಿ ಕೇಂದ್ರದಲ್ಲಿರುವ ಆಳುವ ಪಕ್ಷಕ್ಕೆ ಅನುಕೂಲವಾಗುವ ಹಾಗೆ ಚುನಾವಣೆ ನಡೆಸಲು ಸಾಧ್ಯವಿಲ್ಲ. ಗವರ್ನರು ಶಿಫಾರಸು ಇವೆರಡೂ ರಾಷ್ಟ್ರಪತಿಯ ಶಬ್ದಗಳಲ್ಲಿ ಹೇಳಬೇಕಾದರೆ "ಚುನಾವಣಾ ಪ್ರಕ್ರಿಯೆಯನ್ನೇ ಬುಡಮೇಲು ಮಾಡುವ ಮೊಟಕುಗೊಳಿಸುವ" ಘಟನೆಗಳು.

ತನ್ನನ್ನು ಅಧಿಕಾರದಲ್ಲಿ ಮುಂದುವರಿಸಲು ಅಥವಾ ಕಳಕೊಂಡಲ್ಲಿ ವಾಪಸ್ಸು ಪಡೆಯಲು ಕಾಂಗ್ರೆಸ್ ಪಕ್ಷ ಯಾವುದೇ ಕಾರಸ್ಥಾನಗಳಿಗೂ ಹೇಸುವುದಿಲ್ಲ ಎನ್ನುವುದಕ್ಕೆ ಎಷ್ಟು ಬೇಕಾದರೂ ಉದಾಹರಣೆ ಕೊಡಬಹುದು. ಆಳುವ ಪಕ್ಷದ ಈ ಧೋರಣೆ ರಾಷ್ಟ್ರಪತಿಯವರು ತನ್ನ ಭಾಷಣದಲ್ಲಿ ವಿವರಿಸಿದ ಸಮಸ್ಯೆಗಳಿಗೆ ಕಾರಣವಾದದ್ದು.

ರಾಜೀವ ಗಾಂಧಿಯವರ ಕೆಂಪುಕೋಟೆಯ ಭಾಷಣದಲ್ಲಿ ಮುಖ್ಯವಾದ ವಿಷಯವೊಂದು ಬಿಟ್ಟು ಹೋಗಿದೆ. ತನಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಿಸಿರುವ ಜನಜನಿತವಾಗಿರುವ ಭ್ರಷ್ಟಾಚಾರದ ಬಗ್ಗೆ ಚಕಾರವೆತ್ತಿಲ್ಲ. ಪಾರ್ಲಿಮೆಂಟಿನಲ್ಲಿ ಮತ್ತು ಇತರ ಭಾರೀ ಚರ್ಚಾಸ್ಪದ ವಿಷಯವಾಗಿರುವ ಬೋಫೋರ್ಸ್ ಮತ್ತಿತರ ದಾಂಧಲೆಗಳಿಗೆ ಸಂಬಂಧಪಟ್ಟ ಹಾಗೆ ಪ್ರಧಾನಮಂತ್ರಿಯವರ ಭಾಷಣದಲ್ಲಿ ಒಂದು ಶಬ್ದವೂ ಇರಲಿಲ್ಲ. ರಾಜೀವ ಗಾಂಧಿಯವರ ಕಟ್ಟಾ ಹಿಂಬಾಲಕರು ಸಹ, ಈ ಬಗ್ಗೆ ಮಂತ್ರಿಗಳು ಮತ್ತಿತರ ಆಳುವ ಪಕ್ಷದ ವಕ್ತಾರರು ಕೊಟ್ಟಿರುವ ಕೊಡುತ್ತಿರುವ ಸಮಜಾಯಿಷಿಗಳು ಯಾರನ್ನೂ ನಂಬಿಸಲಾರವು ಎಂದು ಖಾಸಗಿಯಾಗಿ ಒಪ್ಪುತ್ತಾರೆ. ಆದಕ್ಕಾಗೇ ಏನೋ ಈ ಬಗ್ಗೆ ತುಟಿಪಿಟಕ್ಕೆನ್ನದ್ದು.

ರಾಜೀವ ಗಾಂಧಿಯವರು ತಮ್ಮ ಭಾಷಣದಲ್ಲಿ ತನ್ನ ನಾಲ್ಕು ವರ್ಷಗಳ ನಾಯಕತ್ವದಲ್ಲಿ ಪಂಜಾಬ್, ಅಸ್ಸಾಂ, ಮಿಜೋರಾಮ್ ಮತ್ತು ಡಾರ್ಜಿಲಿಂಗ್‌ನ ಸಮಸ್ಯೆಗಳು ಪರಿಹಾರ ಕಂಡಿವೆ ಎಂದು ಹೇಳಿಕೊಂಡಿದ್ದಾರೆ. ಆದರೆ ನಿಜ ಸಂಗತಿ ಏನು ? ಪಂಜಾಬ್, ಇನ್ನೂ ಹತ್ತಿ ಉರಿಯುತ್ತಿದೆ. ಅಸ್ಸಾಂ ಅಸ್ಸಾಮಿಯರು ಮತ್ತು ಇತರ ಭಾಷಾ ಜನಾಂಗಗಳ ಗುಂಪುಗಳ ಮಧ್ಯೆ ಒಡಕಿನಿಂದ ನರಳುತ್ತಿದೆ. ಟಿ.ಎನ್.ವಿ. ಜತೆ ಒಪ್ಪಂದದ ನಂತರವೂ ತ್ರಿಪುರಾ ಯಾವ ಸ್ಥಿತಿಯಲ್ಲಿದೆ ಎಂದರೆ ಅಲ್ಲಿ ಸೈನ್ಯ ಮತ್ತು ಗಲಭೆ ಪೀಡಿತ ಪ್ರದೇಶದ ಘೋಷಣೆ ಜಾರಿಯಲ್ಲಿದೆ. ಮಿಜೋರಾಮ್‌ನಲ್ಲಿ ದಂಗೆಯ ಸ್ಥಿತಿ ಇಲ್ಲದಿದ್ದರೂ ಡಾರ್ಜಿಲಿಂಗ್‌ನ ಸಮಸ್ಯೆ ಹೆಚ್ಚು ಕಡಿಮೆ ಪರಿಹಾರವಾಗಿದ್ದರೂ ಜಾತಿ, ಕೋಮು ಮತ್ತು ಇತರ ವಿಚ್ಛಿದ್ರಕಾರಿ ಪ್ರತ್ಯೇಕತಾವಾದಿ ಆಧಾರದ ಮೇಲೆ ಜನಸಾಮಾನ್ಯರಲ್ಲಿ ಒಡಕುಂಟಾಗಿದೆ. ಕಾಂಗ್ರೆಸ್‌ನ ಕೈಯಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆ ಭದ್ರವಾಗಿದೆ ಎಂದು ಯಾವುದೇ ಪ್ರಾಮಾಣಿಕ ವ್ಯಕ್ತಿ ಹೇಳಲಾರ.

ಆತನ ಪಕ್ಷ ಮತ್ತು ಸರ್ಕಾರ ಬಡತನ, ನಿರುದ್ಯೋಗದ ಸಮಸ್ಯೆ ಪರಿಹಾರ ಮಾಡುವತ್ತಾ ದೊಡ್ಡ ಹೆಜ್ಜೆಗಳನ್ನಿಟ್ಟಿದೆ ಎಂದು ಹೇಳುವ ರಾಜೀವ ಗಾಂಧೀಯ ಭಂಡತನದ ಬಗ್ಗೆ ಯಾರಿಗಾದರು ಆಶ್ಚರ್ಯವಾಗದಿರದು. ಉದ್ಯೋಗ, ಸಂಬಳ ಅಥವಾ ಕೂಲಿ, ಬೆಲೆಗಳು ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಜನತೆಯ ಹಕ್ಕುಗಳಿಗಾಗಿ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಲು ಹೋರಾಟದ ಸಮಸ್ಯೆಗಳು ದಿನೇ ದಿನೇ ಕಷ್ಟಕರವಾಗುತ್ತಿವೆ ಎಂದು ಪ್ರತಿಯೊಬ್ಬ ನಾಗರೀಕನ ಅನುಭವ. ಆದ್ದರಿಂದಲೇ ಎಲ್ಲಾ ವಿಭಾಗಗಳ ಜನರು ವ್ಯಾಪಕ ಮತ್ತು ಸತತ ಚಳುವಳಿ ಮತ್ತು ಹೋರಾಟದಲ್ಲಿ ತೊಡಗಿದ್ದಾರೆ.

ಆದರೆ ಅತ್ಯಂತ ಹಾಸ್ಯಾಸ್ಪದವಾದುದೆಂದರೆ "ಜನರು ತಮ್ಮ ಅಭಿವೃದ್ಧಿಗಾಗಿ ತಮ್ಮ ಶಕ್ತಿ ಪ್ರಯೋಗಿಸಲು ಸಹಾಯ ಮಾಡುವ ವಿಕೇಂದ್ರೀಕೃತ ಅಧಿಕಾರ ಪಂಚಾಯತುಗಳಿಗೆ ಸಿಗುವಂತೆ" ಮಾಡಲು ರಾಜೀವ ಸರ್ಕಾರದ "ದೃಢ ನಿರ್ಧಾರದ ಸಂಕಲ್ಪ" ಇದಕ್ಕಾಗಿ ಆಗತ್ಯಬಿದ್ದರೆ ಸಂವಿಧಾನವನ್ನು ತಿದ್ದುಪಡಿ ಮಾಡಲು ಕಾನೂನುಗಳನ್ನು ಬದಲಿಸಲು ಸರ್ಕಾರ ಸಿದ್ಧವಂತೆ!

ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ವರ್ಷಾನುಗಟ್ಟಲೆ ಪಂಚಾಯತ್ ಚುನಾವಣೆಗಳು ನಡೆದಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಸಂವಿಧಾನದಲ್ಲಿರುವ ಯಾವುದೇ ನಿಶ್ಯಕ್ತತೆಯಿಂದಾಗಿ ಅಲ್ಲ ಕಾಂಗ್ರೆಸ್ ರಾಜ್ಯಗಳಲ್ಲಿ ಚುನಾವಣೆಗಳು ಆಗದೆ ಇರುವುದು ಇದಕ್ಕೆ ವಿರುದ್ಧವಾಗಿ ಹೆಚ್ಚಿನ ಕಾಂಗ್ರೆಸ್ಸೇತರ ರಾಜ್ಯಗಳಲ್ಲಿ ಪಂಚಾಯತ್ ಚುನಾವಣೆಗಳು ಸಕಾಲದಲ್ಲಿ ನಡೆದಿವೆ.

ಅದಕ್ಕೆ ಕಾರಣ ಕಾಂಗ್ರೆಸ್ ನಾಯಕರು ಜನರನ್ನು ಎದುರಿಸಲು ತಯಾರಿಲ್ಲದಿರುವುದು. ತಮಿಳುನಾಡಿನಲ್ಲಿ ಚುನಾವಣೆ ಮುಂದೂಡುವುದಕ್ಕೂ ಜನರನ್ನು ಎದುರಿಸಲು ಧೈರ್ಯವಿಲ್ಲದಿರುವುದು ತಯಾರಿಲ್ಲದಿರುವುದೇ ಕಾರಣ. ನಾಗಲ್ಯಾಂಡಿನಲ್ಲಿ ಕಾಂಗ್ರೆಸ್ಸೇತರ ಸರ್ಕಾರ ರಚಿಸಲು ಬಿಡದಿರಲೂ ಇದೇ ಕಾರಣ. ರಾಜೀವ ಸ್ವತಃ ಪಕ್ಷದ ನಾಯಕತ್ವ ವಹಿಸಿಕೊಂಡ ಮೇಲೆ ಬಾರಿ ಬಾರಿಗೆ ತನ್ನ ಪಕ್ಷದ ಸಾಂಸ್ಥಿಕ ಚುನಾವಣೆಗಳನ್ನು ಮುಂದೂಡುತ್ತಾ ಬಂದಿದ್ದಾರೆ. ಇಂತಹ ಪಕ್ಷದ ನಾಯಕ ತಾನು "ಮೂಲಭೂತ ಪ್ರಜಾಪ್ರಭುತ್ವ" ಸಾಧಿಸುತ್ತೇನೆ ಎಂದು ಹೇಳಿಕೊಳ್ಳುವುದು ಅಪ್ರಾಮಾಣಿಕತೆಯ ಪರಮಾವಧಿ.

ರಾತ್ರಿ ಶಾಲೆ ಆರಂಭ

ಬೆಂಗಳೂರು ನಗರದ ಪಂತರಪಾಳ್ಯ ಡಿ.ವೈ.ಎಫ್.ಐ. ಘಟಕವು 24-8-88ರಂದು ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ರಾತ್ರಿ ಪಾಠಶಾಲೆಯನ್ನು ಆರಂಭಿಸಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಸಿದ್ದಯ್ಯನವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಡಿ. ವೈ ಎಫ್. ಐ. ಕಾರ್ಯವನ್ನು ಶ್ಲಾಘಿಸಿದರು.

ಜನತಾ ಸರ್ಕಾರದ ನೀತಿಯಲ್ಲಿ ಬದಲಾವಣೆ ಬರಲಿ

(1ನೇ ಪುಟದಿಂದ)

ಫೀ-ವಿಸ್ತೃತ ಫೀ ಕ್ರಮಗಳನ್ನು ವೃತ್ತಿಪರ ಸಂಸ್ಥೆಗಳಲ್ಲಿ ಕೊನೆಗೊಳಿಸುವುದು, ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಪಕ್ಷಗಳೊಂದಿಗೆ ಸೇರಿ ಜನರನ್ನು ಸಂಘಟಿಸಿ, ಪ್ರತಿರೋಧ ರೂಪಿಸುವುದು, ಮುಚ್ಚಲ್ಪಟ್ಟ ಕಾರ್ಖಾನೆಗಳನ್ನು ತೆರೆಸುವುದು ಮುಂತಾದ ಜನಪರವಾದ ಧೋರಣೆ ಅನುಸರಿಸಬೇಕೆಂದು ಕೇಳಿಕೊಂಡಿದೆ.

ಸಿ.ಪಿ.ಐ. (ಎಂ) ಪಕ್ಷದ ಎಚ್ಚರಿಕೆ ಮತ್ತು ಜನಾಭಿಪ್ರಾಯಕ್ಕೆ ಬೆಲೆ ಕೊಟ್ಟು ಹೊಸ ಮುಖ್ಯಮಂತ್ರಿಯವರಾದ ಎಸ್. ಆರ್. ಬೊಮ್ಮಾಯಿಯವರು ತಮ್ಮ ಆಡಳಿತೆಗೆ ಹೊಸ ರೂಪ ಕೊಟ್ಟು ಅದನ್ನು ಚುರುಕುಗೊಳಿಸುವುದು ಅತ್ಯಗತ್ಯ. ಹಾಗೆಯೇ ಕೆಳ ಮಟ್ಟದಿಂದಲೂ ನೆಲೆಯೂರಿರುವ ಭ್ರಷ್ಟಾಚಾರ, ಫ್ಯಾಲುಗಳ ಚಲನೆಯಲ್ಲಿ ಬಿಗಿತಗಳನ್ನು ದೂರ ಮಾಡಲು, ಜನರ ಸಮಸ್ಯೆಗಳ ಪರಿಹಾರಕ್ಕೆ ಆದ್ಯ ಗಮನ ನೀಡಲು ಕ್ರಮಕೊಳ್ಳುವುದು ಅತ್ಯಗತ್ಯ. ರಾಜಕೀಯ ಪ್ರಭಾವ ಒತ್ತಡವಿಲ್ಲದೆ, ಅಥವಾ ಅರ್ಜಿದಾರರೇ ಬೇರೆ ರೀತಿಯಿಂದ(ನೀವೇ ಅರ್ಥಮಾಡಿಕೊಳ್ಳಬೇಕು) ಪ್ರಭಾವ ಬೀರದಿದ್ದರೆ ಅರ್ಜಿಗಳು ಚಲಿಸುವುದಿಲ್ಲ. ತಕರಾರು ಕೊಟ್ಟರೂ ಕೂಡ ಅರ್ಜಿಗಳ ಗತಿಯೇನಾಗಿದೆಯೆಂದು ತಿಳಿದುಕೊಳ್ಳುವ ಪ್ರಯತ್ನವನ್ನು ಅಧಿಕಾರಿಗಳು ಮಾಡುವುದಿಲ್ಲ. ನಿಷ್ಠಾವಂತರ ಬದ್ಲಿಯಾಗುತ್ತಿರುವುದನ್ನೂ, ರಾಜಕೀಯ ಒತ್ತಡದಿಂದಾಗಿ ಚಾರ್ಜ್ ತೆಗೆದುಕೊಂಡ ಗಂಟೆಯೊಳಗಾಗಿ ಅದು ರದ್ದಾಗಿ ದೂರದ ಊರಿಗೆ ಬದ್ಲಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅಂತ ನೂರಾರು ಜನರ ನೂರಾರು ಸಮಸ್ಯೆಗಳು ಪರಿಹಾರ ಕಾಣದೆ ನೆನೆಗುದಿಗೆ ಬಿದ್ದಿರುವುದು ಕಂಡುಬರುತ್ತಿದೆ. ಕೆಲಸ ಮಾಡಿಕೊಂಡು ಹೋಗಬಹುದೆಂಬ ವಿಶ್ವಾಸ ಯಾರಿಗೂ ಇಲ್ಲದಾಗಿದೆ.

ತಾ॥ 22 ರಂದು ನಡೆದ ವಿಭಾಗಾಧಿಕಾರಿಗಳ, ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿ ಸಭೆಯಲ್ಲಿ ಮಾತಾಡುತ್ತಾ ಮುಖ್ಯಮಂತ್ರಿ ಬೊಮ್ಮಾಯಿಯವರು ಕಾನೂನು ದತ್ತವಾಗಿರುವ ಅಧಿಕಾರವನ್ನು ಸಂಪೂರ್ಣವಾಗಿ ಚಲಾಯಿಸುವ ಸ್ವಾತಂತ್ರ್ಯವನ್ನು ತಾವು ನೀಡಲಿರುವುದಾಗಿಯೂ, ಸರ್ಕಾರದ ನೀತಿ, ನಿರ್ಣಯ ಆಶಯಗಳ ಜಾರಿ ಹಂತದಲ್ಲಿ ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪವೂ ಬಾರದಂತೆ ನೋಡಿಕೊಳ್ಳುವ ಭರವಸೆಯನ್ನು ನೀಡಿದ್ದಾರೆ. ಅದು ಸ್ವಾಗತಾರ್ಹ. ಆದರೆ ಅಧಿಕಾರಿಗಳು ಸರಕಾರದ ನೀತಿಗನುಸಾರ ವರ್ತಿಸದಿದ್ದರೆ ಅದು ಸರಿಪಡಿಸುವ ಸಲುವಾಗಿ ಮಧ್ಯಪ್ರವೇಶಿಸಬೇಕಾಗುತ್ತದೆಂಬ ಎಚ್ಚರಿಕೆ ನೀಡುವುದೂ ಕೂಡ ಅಗತ್ಯ. ಅಂಥ ಸಮಸ್ಯೆಗಳು ಗಮನಕ್ಕೆ ಬಂದರೆ ನಿಷ್ಠೂರವಾಗಿ ಅವುಗಳನ್ನು ಕೂಡಲೇ ಸರಿಪಡಿಸಿ, ಅಧಿಕಾರಿಗಳಿಂದಾಗಲೀ ನೌಕರರಿಂದಾಗಲೀ ಆಗುವ ತಪ್ಪನ್ನು ಸರಿಪಡಿಸುವ ಆಶ್ವಾಸನೆ ನಾಗರೀಕರು ಅಪೇಕ್ಷಿಸಿದರೆ ತಪ್ಪೇನಲ್ಲ. ಅದೇ ಸಮಯದಲ್ಲಿ ಕಳೆದ 56 ತಿಂಗಳ ಅವಧಿಯಲ್ಲಿ ಕಂಡ ಅಶಿಸ್ತಿಗೆ ವಿಷಾದ ವ್ಯಕ್ತಪಡಿಸಿದ ಮುಖ್ಯಮಂತ್ರಿಯವರು ಅಧಿಕಾರಿಗಳಲ್ಲಿ ಹೊಣೆಗಾರಿಕೆಯ ಅರಿವು ಇರಬೇಕಾದ ಅಗತ್ಯವನ್ನು ಪ್ರತಿಪಾದಿಸಿರುವುದು ಸರಿಯೇ. ಫೈಲುಗಳ ವಿಲೇವಾರಿ ಕುರಿತು ಈಗಾಗಲೇ ಮಾರ್ಗದರ್ಶಿ ಸುತ್ತೋಲೆ ಹೊರಡಿಸಲಾಗಿದೆಯೆಂದೂ ಈಗ ಅದರ ಕಟ್ಟುನಿಟ್ಟಿನ ಜಾರಿ ಆಗಬೇಕಾಗಿದೆಂದೂ ಹೇಳಿದ್ದಾರೆ.

ಅಧಿಕಾರದಲ್ಲಿರುವ ಆಳುವ ಪಕ್ಷ ಒಗ್ಗಟ್ಟಿನಿಂದಿದ್ದು, ತಮ್ಮ ಆಡಳಿತೆ ಭದ್ರವಾಗಿಯೇ ಉಳಿಯುತ್ತದೆಂಬ ಭರವಸೆ ಅಧಿಕಾರಿಗಳಲ್ಲೂ ನೌಕರರಲ್ಲೂ ಮೂಡಿಸದಿದ್ದರೆ ಬೊಮ್ಮಾಯಿಯವರ ಎಚ್ಚರಿಕೆಯಾಗಲೀ ಹಿತವಾದವಾಗಲೀ ನೀರಿನ ಗುಳ್ಳೆಯಂತಾಗುವುದರಲ್ಲಿ ಸಂಶಯವಿಲ್ಲ. ಆಳುವ ಪಕ್ಷದ ಮತ್ತು ಮಂತ್ರಿ ಮಂಡಲದ ಬಲಹೀನತೆಯ ಲಾಭ ಅಧಿಕಾರಿ ವರ್ಗ ಮತ್ತು ನೌಕರ ವರ್ಗ ಪಡೆಯುತ್ತಾರೆಂಬುದಕ್ಕೆ ಹೆಗಡೆ ಸರಕಾರದ ಆಡಳಿತೆಯ ಕೊನೆ ತಿಂಗಳುಗಳ ಹಾಗೆಯೇ ಸದ್ಯದ ಪರಿಸ್ಥಿತಿ ತೋರಿಸಿ ಕೊಡುತ್ತದೆ. ಕಚೇರಿಗಳೆಲ್ಲ ನಿರ್ಭಯತೆಯ ನೆಲೆಬೀಡಾಗದೆ, ನಿರಾಸಕ್ತಿ ಮನೆ ಮಾಡಿದೆ. ಬೊಮ್ಮಾಯಿ ಅವರ ಆಡಳಿತೆಗೆ ಅದು ಅಪಾಯಕಾರಿ ಮಾತ್ರವಲ್ಲ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಆಗಸ್ಟ್ 16ರ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಮಾಡಿದಂತೆ ಕಾಂಗ್ರೆ ಪಕ್ಷದ ಆಡಳಿತೆಯ ವೈಖರಿಯನ್ನು ತುಲನೆ ಮಾಡಿ ಮತ ನೀಡುವ ಅವಕಾಶ 1990 ರ ಕೊನೆಯಲ್ಲಿ ಬರುವುದರಿಂದ ಕರ್ನಾಟಕದಲ್ಲಿಯ ಜನತಾ ಸರಕಾರ ಚರಿತ್ರಾರ್ಹವಾಗಿ ಲಭ್ಯವಾದ ಅಧಿಕಾರವನ್ನು ಉಪಯೋಗಿಸಿ 'ತಾವು ಕಾಂಗ್ರೆ ಅಲ್ಲ, ನಾವು ಜನಪರ ನೀತಿಯನ್ನು ಅನುಸರಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದೇವೆ. ಅವುಗಳ ಪರಿಹಾರಕ್ಕೆ ನಿಷ್ಠೆಯಿಂದ ದಕ್ಷತೆಯಿಂದ ಪ್ರಯತ್ನ ಮಾಡಿದ್ದೇವೆ' ಎಂಬುದನ್ನು ಜನರಿಗೆ ತೋರಿಸಿಕೊಟ್ಟು 'ಇವರನ್ನು ಆರಿಸಿ ತಂದರೆ ಇನ್ನೂ ಹೆಚ್ಚು ಅನುಕೂಲತೆಗಳನ್ನು ಸುಲಭದಲ್ಲಿ ಪಡೆಯಬಹುದು' ಎಂಬ ವಿಶ್ವಾಸವನ್ನು ಜನರಲ್ಲಿ ಮೂಡಿಸವುದು ಅಗತ್ಯ. ಕಳೆದ ಹತ್ತು ವರ್ಷಕ್ಕೂ ಹೆಚ್ಚು ಕಾಲ ಆಡಳಿತ ನಡೆಸುತ್ತಿರುವ ಸಿ.ಪಿ.ಐ.(ಎಂ) ಮುಖಂಡತ್ವದ ಎಡರಂಗ ಸರ್ಕಾರದ ಹಾಗೆಯೇ ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಇ.ಕೆ. ನಯನಾರ್ ಸರಕಾರದ ಎಷ್ಟೋ ಜೀವಂತ ಅನುಭವಗಳು ಕಣ್ಣ ಮುಂದಿವೆ. ಹಿಂದಿನ ಮುಖ್ಯಮಂತ್ರಿ ತನ್ನ ಅಧಿಕಾರಾವಧಿಯಲ್ಲಿ ಅವುಗಳತ್ತ ಗಮನ ಹರಿಸಲಿಲ್ಲ. ಅವರ ಮಂತ್ರಿಮಂಡಲದಲ್ಲಿದ್ದ ಅಬ್ದುಲ್ ನಜೀರ ಸಾಹೇಬರು ಮಾತ್ರ ಪಶ್ಚಿಮ ಬಂಗಾಲ ಸರ್ಕಾರದ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ವ್ಯವಸ್ಥೆಯ ಅಭ್ಯಾಸ ಮಾಡಿ ಅದರ ಅನುಭವದಿಂದ ನಮ್ಮ ರಾಜ್ಯದಲ್ಲೂ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ವ್ಯವಸ್ಥೆ ಮಾಡಿದ್ದಾರಲ್ಲದೆ, ಮುಖ್ಯಮಂತ್ರಿಯವರನ್ನೊಳಗೊಂಡು ಇತರ ಮಂತ್ರಿಗಳು ಏನೂ ಪಾಠ ಕಲಿತಂತೆ ಕಂಡುಬರಲಿಲ್ಲ. ತಾನು ರಾಜೀನಾಮೆ ಕೊಡುವ ಕೊನೆ ಗಳಿಗೆಯಲ್ಲಿ ತನ್ನ ಮಂತ್ರಿಮಂಡಲದಲ್ಲಿ ಕಾರ್ಮಿಕ ಮಂತ್ರಿಯನ್ನಾಗಿ ನೇಮಿಸಿದ ಎಸ್.ಕೆ. ಕಾಂತಾ ಅವರು ತಮ್ಮ ಅಧಿಕಾರದ ಅಲ್ಪ ಕಾಲಾವಧಿಯಲ್ಲಿ ಸ್ವಲ್ಪ ಮಟ್ಟಿಗೆ ಕಾರ್ಮಿಕ ಪರವಾಗಿ ನಿಲುಮೆ ತಾಳಿರುವುದನ್ನು ಬಿಟ್ಟರೆ, ಬೇರೆ ಖಾತೆಗಳ ಮಂತ್ರಿಗಳ ಆಡಳಿತ ವೈಖರಿ ವಿರೋಧಪಕ್ಷ ಆಡಳಿತೆಗೆ ಹೆಸರು ತರುವಂತೆ ಇರಲಿಲ್ಲೆಂದು ಹೇಳಿದರೆ ತಪ್ಪಾಗಲಾರದು.

ಆದ್ದರಿಂದ ಈಗ ಮುಖ್ಯಮಂತ್ರಿ ಬೊಮ್ಮಾಯಿ ಅವರ ಮೇಲೆ ದೊಡ್ಡ ಜವಾಬ್ದಾರಿ ಬಿದ್ದಂತಾಗಿದೆ. ಯಾವ ಜಾತಿ, ವ್ಯಕ್ತಿಗಳ ಒತ್ತಡಕ್ಕೆ ಮಣಿಯದೇ, ರಾಜ್ಯದ ಸಮಗ್ರ ಜನತೆಯ ಹಿತವನ್ನು ಮುಂದಿಟ್ಟುಕೊಂಡು ಆಡಳಿತೆ ನಡೆಸುವುದು ಅತ್ಯಗತ್ಯ. ಬಂಡವಾಳ ಶಾಹಿ ಪಕ್ಷವಾದ ಜನತಾ ಪಕ್ಷದಿಂದ ಅದು ಸುಲಭ ಸಾಧ್ಯವೆಂದು ನಾವು ತಿಳಿದಿಲ್ಲ. ಆದರೆ ಕಾಂಗ್ರೆಯನ್ನು ಅಧಿಕಾರದಿಂದ ದೂರ ಇಡಬೇಕಾಗಿದ್ದರೆ, ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಕೈಯಲ್ಲಿ ಅಧಿಕಾರ ಬರಬೇಕಾಗಿದ್ದರೆ ಕರ್ನಾಟಕದಲ್ಲಿಯ ಜನತಾ ಪಕ್ಷ ಮತ್ತು ಅದರ ಸರಕಾರ ಸಿ.ಪಿ.ಐ. (ಎಂ) ಸಿ.ಪಿ.ಐ. ಮೊದಲಾದ ಎಡ ಪಕ್ಷಗಳ ಜೊತೆಯಲ್ಲಿ ಹೆಚ್ಚಿನ ಸಂಬಂಧ, ಸಂಪರ್ಕ ಇಟ್ಟುಕೊಂಡು ಅವರ ಸಲಹೆ ಸೂಚನೆಗಳನ್ನು ಪಡೆದು ಆಡಳಿತೆಯನ್ನು ಬಿಗಿಗೊಳಿಸಿ, ಅದು ಜನತೆಯನ್ನು ಆಶೋತ್ತರಗಳಿಗೆ ಸ್ಪಂದಿಸಿ ಅವುಗಳ ಪರಿಹಾರಕ್ಕೆ ನಿಷ್ಠೆಯಿಂದ ದುಡಿಯುವುದು ಅಗತ್ಯ. ಆದ್ದರಿಂದ ಜನತಾ ಮುಖಂಡರೂ ಎಸ್.ಆರ್. ಬೊಮ್ಮಾಯಿಯವರು ಈ ಕಾಲ ಘಟ್ಟದ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಂಡು ತಮ್ಮ ಕರ್ತವ್ಯವನ್ನು ಪೂರೈಸುತ್ತಾರೆಂದು ಆಶಿಸೋಣ.

ಪ್ರಜಾಪ್ರಭುತ್ವ ರಕ್ಷಿಸಿ ದಿನ

ದೇಶದಲ್ಲಿ 59 ನೇ ತಿದ್ದುಪಡಿಯನ್ನು ಪಂಜಾಬಿನಲ್ಲಿ ಜಾರಿಗೊಳಿಸಿ ಹಂತ ಹಂತವಾಗಿ ತುರ್ತುಪರಿಸ್ಥಿತಿಯನ್ನು ಹೇರುವ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿರುವ ರಾಜೀವ್ ಗಾಂಧೀ ಕೇಂದ್ರ ಸರ್ಕಾರ 1975 ರ ತುರ್ತುಪರಿಸ್ಥಿತಿ ನೆನಪಿಸುತ್ತದೆ ಎಂದು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾ॥ ಎನ್.ಕೆ. ಉಪಾಧ್ಯಾಯರು ಹೇಳಿದರು. ಅವರು ಡಿ.ವೈ.ಎಫ್.ಐ. ಬಿಜಾಪುರ ಘಟಕ ಏರ್ಪಡಿಸಿದ್ದ 'ಪ್ರಜಾಪ್ರಭುತ್ವ ರಕ್ಷಿಸಿ' ದಿನಾಚರಣೆಯ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಜನತಾಪಕ್ಷದ ವಿ.ಎಸ್. ತೊರಗಲ್‌ರವರು ಮಾತನಾಡಿ 59 ನೇ ತಿದ್ದುಪಡಿ ಮೂಲಕ ಜನತೆಯ ಬಾಯಿ ಮುಚ್ಚಿಸಲು ಕಾಂಗ್ರೆಸ್‌ಗೆ ಇಂದು ಸಾಧ್ಯವಿಲ್ಲವೆಂದರು. ರೈತನಾಯಕ ಭೀಮಸೀ ಕಲಾದಗಿಯವರು ಮಾತನಾಡಿ ಪಂಜಾಬ್‌ನ ಭಯೋತ್ಪಾದಕರಿಗೆ ಉತ್ತೇಜನ ನೀಡುವ ಧರ್ಮಗುರುಗಳಿಗೆ ರಿಯಾಯಿತಿ ನೀಡುವ ಸರ್ಕಾರ ಸಂದರ್ಭ ಸಾಧಕನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ಮುರಾನಪುರದಲ್ಲಿ ಮಹಿಳಾ ಸಂಘಟನಾ ಘಟಕ

15-8-1988 ರಂದು ರಾಯಚೂರು ಜಿಲ್ಲೆಯ ಮುರಾನಪುರದಲ್ಲಿ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಗ್ರಾಮ ಘಟಕ ಅಸ್ತಿತ್ವಕ್ಕೆ ಬಂದಿತು. ಅದೇ ದಿನ ಕೇಂದ್ರ ಸಮಿತಿಯ ಕರೆಯ ಮೇರೆಗೆ ದಲಿತ ಮತ್ತು ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆಯನ್ನು ಆಚರಿಸಿತು.

12 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಗಿ ಈ ಕೆಳಗಿನವರು ಪದಾಧಿಕಾರಿಗಳಾಗಿ ಆಯ್ಕೆಯಾದರು.

ಅಧ್ಯಕ್ಷರು ಗಂಗಮ್ಮ, ಉಪಾಧ್ಯಕ್ಷರು ಮಾಲಮ್ಮ, ಅಮರಮ್ಮ, ಕಾರ್ಯದರ್ಶಿ ಸಾವಿತ್ರಮ್ಮ, ಸಹಕಾರ್ಯದರ್ಶಿ ಹುಲಿಗಮ್ಮ, ಕಮಲಾಕ್ಷಿ, ಖಜಾಂಚಿ ಮೀನಾಕ್ಷಿ

Printed & Published by P. Ramachandra Rao on behalf of the Communist Party of India (Marxist) Karnataka State Committee, K. V. Temple Street, Sulthanpet, Bangalore-560053. Editorial and Managerial Office : L-56, K. V. Temple Street, Sulthanpet, B-53, Phone : 75331.
Editor : P. Ramachandra Rao, Managing Editor : N. K. Upadhayaya. Janagere Mudrana, Bangalore-21.